992 Rare Bk

ಗ್ರಂಥಾಲಯ

108047

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ.

1952

108047

1952

Stagin ... rved
Perm ... blishe
v ... ce.

ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ.

ಪೂರ್ಣಿಮಾ ಸಾಹಿತ್ಯ ಮಾಲೆ: ೧

ಎಸ್. ಎಸ್. ಹಿರೇಮಠ
ನಿವೃತ್ತ ಪ್ರಾಂಶುಪಾಲರು
ಬೆಳಗಾವಿ

"ಗಂಡ್ಸಲ್ಲೇ ಗಂಡ್ಸು"

(ಏಕಾಂಕ ನಾಟಕ)

FIRST GRADE REVENUE INSPECTOR.

ಕೆ. ಗುಂಡಣ್ಣ

★

AKSHARA GRANTHALAYA
ACC.NO. 108047

ಪ್ರಕಾಶಕರು
"ಪೂರ್ಣಿಮಾ ಪ್ರಕಾಶನ"
'ವಿದ್ಯಾರ್ಥಿ' ಕಾರ್ಯಾಲಯ
ಬಳೇಪೇಟೆ, ಬೆಂಗಳೂರು-೨

COPY RIGHT

Staging, Filming, Translating and other Rights reseved.
Permission to Stage apply to: The Author C/o Puisher
with a Royalty of Rs. 10 only per performance.

ಬೆಲೆ ೦-೧೦-೦

108047

8K2.6
GUN 8

ಪ್ರಕಾಶಕರು:
H. S. ರೇಣುಕ ಪ್ರಸಾದ್ ಬಿ.ಎ.,
'ವಿದ್ಯಾರ್ಥಿ' ಕಾರ್ಯಾಲಯ
ಬಳೇಪೇಟೆ, ಬೆಂಗಳೂರು-2.

ಮುದ್ರಕರು:
ಸ್ವತಂತ್ರ ಕರ್ಣಾಟಕ ಪ್ರೆಸ್,
ರಂಗಸ್ವಾಮಿ ಗುಡಿಬೀದಿ,
ಬಳೇಪೇಟೆ, ಬೆಂಗಳೂರು-೨.

ನಾಂದಿ....

ನನ್ನ "ಅನ್ ಎಂಪ್ಲಾಯ್ಡ್ ಅಳಿಯ" ಸೃಷ್ಟಣೆಯಾದ ಆರುತಿಂಗಳಲ್ಲೇ ಕರ್ನಾಟಕದಾದ್ಯಂತ ಹಲ ಬಾರಿ ರಂಗಭೂಮಿಯ ಮೇಲೆ ತನ್ನ ಪ್ರತಿಭೆ ತೋರಿದನಂತರ ಪ್ರಸಿದ್ಧ ನಾಟಕಕರ್ತರ ಎದುರಿನಲ್ಲಿ "ಗಂಡ್ಸಲ್ವೇ ಗಂಡ್ಸು" ಎಂದು ಎದೆ ತಟ್ಟಿಕೊಳ್ಳುತ್ತಿದ್ದೇನೆ. "ಗಂಡ್ಸಲ್ವೇ ಗಂಡ್ಸು" ಎಂಬುದನ್ನು ಮೊಟ್ಟಮೊದಲು ಸಮರ್ಥಿಸಿಕೊಂಡವರು ಬೆಂಗಳೂರಿನ ಉಷಾ ಕಲಾವಿದರು. ಇವರು ಈ ನಾಟಕವನ್ನು ಅ॥ ಭಾ॥ ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ ಅತ್ಯಂತ ಯಶಸ್ವಿಯಾಗಿ ಅಭಿನಯಿಸಿ ಇತರ ಹತ್ತಾರು ಕಲಾವಿಲಾಸಿ ಸಂಸ್ಥೆಗಳವರೂ "ಗಂಡ್ಸಲ್ವೇ ಗಂಡ್ಸು" ಎಂದು ಹೇಳಿಕೊಳ್ಳಬೇಕೆಂಬ ಹಂಬಲ ಹುಟ್ಟಿಸಿದ್ದಾರೆ. ಇದಕ್ಕಾಗಿ ಉಷಾ ಕಲಾಸಂಘದ ನಾಟಕಶಾಖೆಯ ಕಾರ್ಯದರ್ಶಿ ಶ್ರೀ ಬಿ. ಎನ್. ನಾರಾಯಣ್‌ರವರಿಗೂ, ಅಂದು ನಾಟಕದಲ್ಲಿ ಪಾತ್ರವಹಿಸಿದ್ದ ಅವರ ಮಿತ್ರರಿಗೂ ಮತ್ತು ಎರಡನೆಯ ಬಾರಿ ಯಶಸ್ವಿಯಾಗಿ ಅಭಿನಯಿಸಿದ "ವಿದ್ಯಾರ್ಥಿ ಕಲಾವಿದ"ರಿಗೂ ನಾನು ಚಿರಋಣಿ.

ಈ ನಾಟಕದ ಪ್ರಕಾಶನ ಭಾರವನ್ನು ಹೊತ್ತು ಕೃತಿಯನ್ನು ಬೆಳಕಿಗೆ ತಂದು "ಗಂಡ್ಸಲ್ವೇ ಗಂಡ್ಸು" ಎನ್ನಿಸಿ ಬೆನ್ನು ತಟ್ಟಿಸಿಕೊಂಡಿರುವ ಪೂರ್ಣಿಮಾ ಪ್ರಕಾಶನ ಸಂಸ್ಥೆಯ ಒಡೆಯರಾದ ಶ್ರೀ ಎಚ್. ಎಸ್. ರೇಣುಕ ಪ್ರಸಾದ್ ಬಿ. ಎ. ಅವರಿಗೆ ನಾನು ಚಿರಋಣಿ. ಪುಸ್ತಕವನ್ನು ಅಂದವಾಗಿ ಅಚ್ಚುಹಾಕಿರುವ "ಸ್ವತಂತ್ರ ಕರ್ನಾಟಕ ಪ್ರೆಸ್" ಮಾಲೀಕರಿಗೂ ನನ್ನ ಧನ್ಯವಾದಗಳು. ಈ ನಾಟಕವನ್ನು ಪ್ರದರ್ಶಿಸಿ, ಪ್ರೋತ್ಸಾಹ ಕೊಟ್ಟ, ಕೊಡುವ ಎಲ್ಲಾ ಸಂಘ ಸಂಸ್ಥೆಗಳವರಿಗೂ ನನ್ನ ಧನ್ಯವಾದಗಳು.

ಬೆಂಗಳೂರು }
15-8-1952 }

ಇತಿ ನಿಮ್ಮವ,
ಕೋಲಾರ ಗುಂಡಣ್ಣ.

ತೆರೆಯ ಮುಂದೆ ಬರುವವರು:

೧. ಅಸಿಸ್ಟೆಂಟ್ ಕಮೀಷನರ್ ಸುಂದರರಾವ್: ಗಂಡ್ಸು
(ವಯಸ್ಸು ಸುಮಾರು ೩೦ ವರ್ಷ)

೨. ಮಿಸೆಸ್ ಮೀನಾಕ್ಷಿ ಎಂ. ಎ.,: ಆ ಗಂಡ್ಸಿನ ಕೈಹಿಡಿದ ಹೆಂಗ್ಸು
(ವಯಸ್ಸು ೨೦ಕ್ಕೆ ಮೀರಿಲ್ಲ.)

೩. ನಾಗಜ್ಜಿ: ಸುಂದರರಾಯರ ತಾಯಿ
(ವಯಸ್ಸು ಸುಮಾರು ಅರ್ಧ ಸೆಂಚುರಿ)

೪. ಮಿ|| ಸುಬ್ಬು: } ಸುಂದರರಾಯರ ಗೆಳೆಯ-ಗೆಳತಿಯರು.
೫. ಮಿಸ್ ಲೀಲಾ: } (ವಯಸ್ಸು ೨೫ ಮತ್ತು ೨೦)

ಏಕೈಕ ದೃಶ್ಯ: ಸುಂದರರಾಯರ ಮನೆಯ "ಆಫೀಸ್ ರೂಂ"

ಪ್ರದರ್ಶನದ ಅವಧಿ: ಸುಮಾರು ಒಂದು ಘಂಟೆ.

ಗಂಡ್ಸಲ್ವೇ ಗಂಡ್ಸು

[ಅಸಿಸ್ಟೆಂಟ್ ಕಮಿಷನರ್ ಸುಂದರರಾಯರ ಮನೆಯಲ್ಲಿ “ಆಫೀಸ್ ರೂಂ”. ಬಲ ಮೂಲೆಯಲ್ಲಿ ಒಂದು ಟೇಬಲ್, ಎರಡು ಕುರ್ಚಿಗಳೂ ಇವೆ. ಎಡ ಮೂಲೆಯಲ್ಲಿ ಮತ್ತೊಂದು ಟೇಬಲ್ ಮೇಲೆ ‘ಫ್ಲವರ್‌ವಾಸ್’ ಇಡಲಾಗಿದೆ. ಗೋಡೆಯ ಮೇಲೆ ಎರಡು ಮೂರು ಸುಂದರ ಕ್ಯಾಲಂಡರ್‌ಗಳು ಹಾಕಲ್ಪಟ್ಟಿವೆ. ತೆರೆ ತೆಗೆದೊಡನೆ [illegible]ರ್ಗ್ರೀನ್” ಪುಸ್ತಕವೊಂದನ್ನು ಹಿಡಿದು ಓದುತ್ತಾ ಶತಪಥ ಹಾಕುತ್ತಿರುವರು. ಒಂದೆರಡು ನಿಮಿಷದಲ್ಲಿ ಎಡಗೈಯಲ್ಲಿ ಸಣ್ಣ ಕನ್ನಡಿ ಹಿಡಿದು ಮುಖನೋಡಿಕೊಳ್ಳುತ್ತಾ, ಬಲಗೈಯಲ್ಲಿನ ‘ಪಫ್’ನಿಂದ ಮುಖದ ಮೇಲಿನ ಪೌಡರ್ ಸರಿಮಾಡಿಕೊಳ್ಳುತ್ತಾ ಮೀನಾಕ್ಷಿ ಪ್ರವೇಶ. ಮೀನಾಕ್ಷಿಯನ್ನೇ ರಾಯರು ಒಂದೆರಡು ನಿಮಿಷ ದಿಟ್ಟಿಸಿ ನೋಡಿ ಕೃತಕ ಕೆಮ್ಮು ಕೆಮ್ಮುವರು. ಕೆಮ್ಮಿನ ಶಬ್ದ ಕೇಳಿ ಮೀನಾಕ್ಷಿ ತಲೆ ಎತ್ತಿನೋಡಿ ಕನ್ನಡಿಯನ್ನೂ ಪಫನ್ನು “ವ್ಯಾನಿಟಿಬ್ಯಾಗ್”ನಲ್ಲಿಡುತ್ತಿರುವಳು.]

ಸುಂದ್ರು: ಅಲ್ವೇ, ನೋಡೋಕ್ಮಾತ್ರಾ ಇಷ್ಟು ಚನ್ನಾಗಿದ್ದೀಯಾ.... ಮಾತ್ನಾಡಿಸಿದ್ರೆ ಅದ್ಯಾಕ್ ಹಾಗೆ ಬೇಟಿ ನಾಯಿ ಬಿದ್ದಾಗ್ ಮೈಮೇಲ್ ಬೀಳೋಕ್ಬರ್ತೀಯಾ !!........ಎಷ್ಟಾದ್ರೂ ನಾನ್ ಗಂಡಾ ಅಲ್ವೇನೇ ?;....ಗಂಡ್ಸಲ್ವೇನೇ ?;....ಗಂಡಾ ಅನ್ನೋ ಭಯಾ, ಗಂಡ್ಸೂ ಅನ್ನೋ ಭಯಾ ಕೊಂಚವೂ ಇಲ್ದೆ ಹೀಗ್ ಮೇರಿತಾ ಇದ್ದೀಯಲ್ಲಾ....ನೋಡ್ದೋರ್ ಏನಂತಾರೇ....?

ಮೀನೂ: [ಧೋರಣೆ] ಏನಂತಾರೆ....ಮಿಸೆಸ್ ಮೀನಾಕ್ಷಿ ಎಂ.ಎ. ಅವ್ರು; ಮಹಿಳಾ ಸಮಾಜದ ಅಧ್ಯಕ್ಷಿಣಿ; ಶಿಶು ವಿಹಾರದ ಸದಸ್ಯಣಿ; ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಹೋರಾಡ್ತಿರೋ ಸಾಧ್ವೀಮಣಿ.

ಸುಂದ್ರು: [ಅಷ್ಟರಲ್ಲಿ ಬಾಯಿ ಹಾಕಿ] ಅಯ್ಯೋ.... ಸಾಧ್ವೀಮಣಿ, ಮುತ್ತಿನ ಕಣಿ.... ಹಾಕೆ ನಿನ್ನಾಲ್ಗೆಗ್ಬ್ರೇಕು ನಾಯಕ್ಮಣಿ.

ಮೀನೂ: ಹಾಕ್ತೀನಿ; ಹೈಡ್ರಾಲಿಕ್ ಬ್ರೇಕೇ ಹಾಕ್ತೀನಿ;.... ಆದ್ರೇ ಗಂಡಸರ ಗುಲಾಮಗಿರಿಯಿಂದ ಸ್ತ್ರೀಯರನ್ನು ಪಾರುಮಾಡಿ ಸ್ವಾತಂತ್ರ್ಯ ಸಾಧಿಸಿಕೊಡೋಕ್ ಹೊರಟಿರೋ ನನ್ನ ಬ್ರೇಕ್ ಹಾಕಿ ನಿಲ್ಸೋಕೆ ಯಾರಿಂದ್ಲೂ ಸಾಧ್ಯವಿಲ್ಲ. **ಹೆಂಗ್ಸೂ ಗಂಡ್ಸಿಗೇ ಬರೀ ಹೆಂಡ್ತೀನೇ ಅಲ್ಲಾ.**

ಸುಂದ್ರು: ಹೌದೂ; ಬರೀ Misses ಏ ಅಲ್ಲಾ Master ಊ ಕೂಡಾ.

ಮೀನೂ: Master ಅಲ್ದಿದ್ರೂ ಸರ್ವೆಂಟೇನೂ ಅಲ್ಲಾ.

ಸುಂದ್ರು: ನೀನು!! ಸರ್ವೆಂಟೂ!!!;.... ಸರ್ವೆಂಟಲ್ಲಾ ಕಾಣೇ ನೀನೂ.... **ಸರ್ಪೆಂಟೂ** ಕೋಪಿಸಿಕೊಂಡ್ರೆ ಕೋಟಿಚ್ಚಾ;.... ನಾಗರ ಹಾವು;.... ಕರೀ ನಾಗರ ಹಾವು;

ಮೀನೂ: ಹೌದು,.... ನಾನು ಕರೀ ನಾಗರಹಾವು; ನೀವೂ....? ಆ ಕರೀ ನಾಗರಹಾವ್ನ ಬಡಿದು ಬಾಯಿಗೆ ಹಾಕ್ಕೊಳ್ಳೋಕ್ ಹವಣಿಸ್ತಿರೋ **ಮುಂಗ್ಸಿ.**

ಸುಂದ್ರು: [ಚಕಿತ] ಮುಂಗ್ಸಿss!!!........ ಲೇ ಲೇ; ಏನ್ ಬಾಯೇ. ಏನ್ ಬಾಯೇ; ನನ್ನ ನೋಡಿದ್ರೇ ಕೊಂಚಾನಾದ್ರೂ ಭಯಾ ಇಲ್ವಲ್ಲೇ !!!

ಮೀನೂ: [ನಗುತ್ತಾ] ಭಯಾ! .... ನಿಮ್ಮನ್ ನೋಡಿದ್ರೆ ನನ ಗ್ಭಯಾ !!.... Oh! God!!.... ಅಲ್ಲಾ ನಿವೇನ್ ಹುಲಿಯೇ ಸಿಂಹವೇ;.... ನೀವೂ ನನ್ನ ಹಾಗೇ ಮನುಷ್ಯರು.

ಸುಂದ್ರು: ಆದ್ರೇ ನಿನ್ನ ಹಾಗ್ ಹೆಂಗ್ಸಲ್ವಲ್ಲಾ.

ಮೀನೂ: ಹೆಂಗ್ಸಲ್ಲದಿದ್ರೇನು,....ಹೆಂಗ್ಸಿನ ಕೈ ಹಿಡಿದ **ಗಂಡ್ಸೂ.**

ಸುಂದ್ರು: ಸಧ್ಯಕ್ಕೆ ಅದ್ನಾದ್ರೂ ಒಪ್ಕೊಂಡಿಯಲ್ಲ.

ಮೀನೂ: ಅಲ್ಲಾ, ಗಂಡ್ಸಾದ ಮಾತ್ರಕ್ಕೆ ಏನ್ ಹೆಚ್ಚು?....ಆಫೀಸ್ನಲ್ಲಿ ಅಸಿಸ್ಟೆಂಟ್ ಕಮಿಷನರು.

ಸುಂದ್ರು: [ಅಷ್ಟರಲ್ಲಿ ಭಾಯಿ ಹಾಕಿ] ಮನೇಲಿ Acting Cook ಉ.

ಮೀನೂ: ಕುಕ್ಕೂ!!....ಅಲ್ಲಾ, ಗಂಡ್ಸಾದ ಮಾತ್ರಕ್ಕೇ ಅಡಿಗೇ ಮಾಡಬಾರ್ದೂ ಅಂತ ಶಾಸ್ತ್ರ ಏನಾದ್ರೂ ಇದೆಯೇನೂ ?.... ಇನ್ನೂ ಶಾಸ್ತ್ರದ ಪ್ರಕಾರ ನೋಡಿದ್ರೇ ಹೆಂಗಸಿಗಿಂತಾ ಗಂಡಸಿಗೇ ಅಡಿಗೆ ಮಾಡೋ ಹಕ್ಕು ಜಾಸ್ತಿ. ಆ ಪಾಕಶಾಸ್ತ್ರದ ಮೂಲ ಪುರುಷ 'ನಳ' ಗಂಡ್ಸಲ್ವೇನೋ;....ಇನ್ನು....ಆ ಮಹಾ ಬಲಶಾಲಿ ಭೀಮ....ಯುದ್ಧರಂಗದಲ್ಲಿ ಕೈಲಿ ಗದೇ ಹಿಡಿದು ಶತ್ರುಗಳ ರುಂಡಗಳನ್ನು ಚಂಡಾಡಿದ ಆ ಭೀಮಾ.... ಆ ಗದೇ ಹಿಡಿದ ಕೈಯಲ್ಲೇ ವಿರಾಟನ ಅರಮನೆಯಲ್ಲಿ ಸೌಟು ಹಿಡಿದು ಸಾರಿಗೆ ಒಗ್ಗರಣೆ ಕೊಡಲಿಲ್ವೇ;....ಹೀಗಿರುವಾಗ ಅಸಿಸ್ಟೆಂಟ್ ಕಮಿಷನರ್ ಆದ ಮಾತ್ರಕ್ಕೇ ಅಡಿಗೆ ಮಾಡ್ಬಾರ್ದೂ ಅಂತ ಸರ್ಕಾರದವರೇನಾದ್ರೂ ರೆಗ್ಯುಲೇಷನ್ ಮಾಡಿದ್ದಾರೇನು?

ಸುಂದ್ರು: [ನಿಟ್ಟುಸಿರು ಸುಯ್ದು] ಅರ್ಥವಾಯ್ತು ಕಾಣೇ....ಅರ್ಥವಾಯ್ತೂ;....'ಆಫೀಸಿನ ಆಡಳಿತ ಜೊತೆಗೆ ಅಡಿಗೇ ಮನೆ ಆಡಳಿತಾನೂ ವಹಿಸ್ಕೊಳ್ಳಿ;....ನಾಳೇ ಏನಾದ್ರೂ ಮಗೂ ಆದ್ರೆ....ಮನೇಲೇ ಇದ್ದು "ಉಳು ಉಳಾಯಿ"ಅಂತ ತೊಟ್ಟಿಲು ತೂಗಿ. ನಾನ್ಮಾತ್ರ "ಸ್ತ್ರೀ ಸ್ವಾತಂತ್ರ್ಯ....ಸ್ತ್ರೀ ಸ್ವಾತಂತ್ರ್ಯ" ಅಂತ ಸಿಕ್ಕಿ ಸಿಕ್ಕಿದ ಕಡೆ ಸಿಕ್ಕಾಪಟ್ಟೆ ಭಾಷಣಮಾಡ್ತ

ನಿಮ್ಮುಖಕ್ಕೆ ಮಸಿ ಬಳೀತಿರ್ತೀನಿ ಅಂತಾ ಅಲ್ವೇನೆ ನೀನ್ ಹೇಳೋದೂ.?

ಮೀನೂ: ಹಾಗಾದ್ರೇ....ನನ್ನಿಂದ ನಿಮ್ಮ ಮಾನ ಹೋಗ್ತಾ ಇದೇ ಅನ್ನಿ ?

ಸುಂದ್ರು: ಮಾನಾ ಅನ್ನೋದ್ ಮೊದಲಾಗ್ಗಿದ್ದರೆ ತಾನೇ ಹೊಗೋದು. ಎಂದು ನಿನ್ನ ಮದ್ವೆಯಾದ್ನೋ ಅಂದೇ ಅಡ ವಿಟ್ಟೆ ನನ್ನ ಮಾನಾ ಮರ್ಯಾದೆ ಎಲ್ಲಾ ನಿನ್ಹತ್ರ.

ಮೀನೂ: ಮತ್ತಿನ್ಯಾಕ್ ಯೋಚ್ನೆ ಬಿಡಿ.

ಸುಂದ್ರು: ಬಿಟ್ಟೇ ಬಿಟ್ಟದ್ದೀನಿ ಅನ್ನು;....ಆದ್ರೂ,

ಮೀನೂ: ಏನ್ ಆದ್ರೇ?

ಸುಂದ್ರು: [ತುಸುಕೋಪ] ಏನ್ ಏನು..ನಮ್ಮಪ್ಪಾಅಮ್ಮಾ ಹೇಳ್ದಾಗೆ ಕೇಳಲಿಲ್ವಲ್ಲಾಂತ.

ಮೀನೂ: [ಘೋರಣೆ] ಓಹೋ! ....ಏನ್ ಹೇಳಿದ್ರೋ ನಿಮ್ಮ ಅಪ್ಪಾ ಅಮ್ಮಾ ?

ಸುಂದ್ರು: ಏನ್ಹೇಳ್ತಾರೇ.... ಹುಡುಗಿ Qualification ನೋಡ್ಬೇಡಾ Quality ನೋಡು ಅಂದ್ರು ! ನಾನು Qualification ಮುಖ್ಯ Quality ಏನೂ ಅಂದೆ. Qualificaiton-ಸರಿಹೋಯ್ತು; Quality ಫೈರ್ ಬ್ರಾಂಡ್ ಆಯ್ತು.

ಮೀನೂ: (ಘೋರಣೆ) ಸರಿಸರಿ; ನಿಮ್ಮ ಜೊತೆ ಮಾತ್ನಾಡ್ತಾ ನಿಂತ್ಕೊಂಡ್ರೆ ಎಂದಿಗೂ ಪೂರೈಸೋಲ್ಲ. ಇವೊತ್ತು Special Meeting ಇದೆ. ಕೊಂಚ ಜಾಗ್ರತೆ ಹೋಗ್ಬೇಕು.

ಸುಂದ್ರು: ಓಹೋ !....ಅದಕ್ಕೇನೇನೋ ಹೀಗ್ Special ಆಗಿ ಅಲಂಕಾರ ಮಾಡ್ಕೊಂಡ್ ಹೋಗ್ತಿರೋದು !!

ಮೀನೂ: ಹೌದೌದು !..................ನಾನಿನ್ನ್ ಹೋಗ್ಬರ್ತೀನಿ [ಕೊಂಚದೂರ ಹೋಗುವಳು]

ಸುಂದ್ರು: ಹೋಗ್ಬಾ:....ಹೋಗಿ ಬಂದ್ಬಿಡು ;....[ಜೋರಿನಿಂದಲೇ] ಲೇ ಮೀನು....ಬಾರೇ ಇಲ್ಲಿ.

ಮೀನೂ: [ಹಿಂದಿರುಗಿ ಬಂದು] ಏನದು ?

ಸುಂದ್ರು: ಇವೊತ್ತು ನನಗೆ ಆಫೀಸ್‌ನಲ್ಲಿ ಕೊಂಚ ಅರ್ಜೆಂಟ್ ಕೆಲ್ಸಾ ಇದೆ. ಜಾಗ್ರತೆ ಆಫೀಸ್ಗ ಹೋಗ್ಬೇಕೂ ಅಂದೆ.

ಮೀನೂ: ಹೋಗಿ....ನಾನೇನ್ ಬೇಡಾಂದ್ನೇ ?

ಸುಂದ್ರು: ಬೇಡ ಅಂತ ನೀನ್ಯಾಕ್ ಅಂತಿ....ಅಲ್ಲಾ, ಜಾಗ್ರತೆ ಬಂದು ಕೂಳ್‌ಗೀಳ್ ಕಾಣಿಸ್ತೀಯಾ ಅಂದೆ.

ಮೀನೂ: ಹೇಗೆ ಹೇಳಲಿ....ಜಾಗ್ರತೆ Meeting ಮುಗಿಯುತ್ತೇ ಅಂತ. ಇವೊತ್ತು Important Subject-ಅದೇ ಡೈವೋರ್ಸ್ಸ ಡಿವಿಡೆಂಟ್-ಹಿಂದೂ ಕೋಡ್‌ಬಿಲ್ ತಿದ್ದುಪಡಿ ಪ್ರಶ್ನೆ. ಅದಕ್ಕೆ ಕೊಂಚ ಲೇಟಾದ್ರೂ ಆಗಬಹುದು.

ಸುಂದ್ರು: ಅದಕ್ಕೇನು ಮಾಡೂ ಅಂತಿ ?

ಮೀನೂ: ಮಾಡೋದೇನೂ ;....ಅಕ್ಕಿ ತೊಳದಿಟ್ರೆ ಅನ್ನ ಆಗುತ್ತೆ. ಜೊತೆ ಬೇಳೆಗೆ ಉಪ್ಪು, ಹುಣಸೆಹಣ್ಣು, ಮೆಣಸಿನಪುಡಿ ಹಾಕಿದ್ರೆ ಸಾರಾಗುತ್ತೆ. ಅದ್ನ ಮಾಡೋಕೆ ನಾನೇ ಬರ್ಬೇಕೇ ?....ಗಂಡಸರ ಕೈಲಿ ಅಕ್ಕಿ--ಬೇಳೆ ಬೆಯ್ಯೋಲ್ಲಾ ಅನ್ನುತ್ತೀನೋ ?............ನಾನಿನ್ನ ಹೋಗ್ತೀನಿ....ಹೊತ್ತಾ ಗ್ಹೋಯ್ತು.

ಸುಂದ್ರು: ಮಿಾನೂ....ಮಿಾನೂ.

ಮಿಾನೂ: [ನಿಷ್ಕ್ರಮಿಸುತ್ತಾ] ಹೊತ್ತಾಗ್ಹೋಯ್ತು........ಹೊತ್ತಾಗ್ಹೋಯ್ತು.

ಸುಂದ್ರು: [ಶಥಪತ-ಸ್ವಗತ]ಹೊರಟ್ಹೋದ್ಳು....ಹೊರಟ್ಹೋದ್ಳು.... ಅಲ್ಲಾ....ಬರ್ತ್ತಾ ಯಾಕೋ ವಿಪರೀತಕ್ಬರ್ತಾ ಇದೆಯಲ್ಲಾ ! ದಿನ ಬೆಳಗಾದ್ರೆ ಮಿಾಟಿಂಗೂ, ಭಾಷಣ, ಲೊಟ್ಟೊಲೊಸಗು ಅಂತ ಮನೇನೇ ಸೇರೋಲ್ವಲ್ಲಾ !!...ನನ್ನ Positon ಓ ಆಕ್ವರ್ಡು. ಆಫೀಸ್‌ನಲ್ಲಿ ಹೆಡ್‌ಗುಮಾಸ್ತನಿಂದ ಹಿಡಿದು ಹನುಮನ್ವರ್ಗ್ಗೂ ನನ್ ಹೆಲ್ಪೆಸ್‌ನೆಸ್ ವಿಷಯವೇ.... ಮರೇಲಿ ಅನ್ಕೊಂಡ್ರೂ ಕಿವಿ ಚುರುಕು....ಇನ್ನು Friends ಗೋ ನನ್ನ ವಿಷಯ ಫ್ಯಾನ್ಸಿ ; ....[ಧೈರ್ಯ ತಂದ್ಕೊಂಡು].... ಇಲ್ಲಾ....ಇಲ್ಲಾ....ಗಂಡ್ಸೂ ಅನ್ನೋ ಗೈರತ್ತು ನನ್ನಲ್ಲೇನ್ ಗೈರುಹಾಜರಿಯಾಗಿಲ್ಲ. ಮನೇಗ್ ಬರ್ಲಿ ಇವೊತ್ತು....ಸರಿಯಾದ್ ಬುದ್ಧಿ ಕಲಿಸ್ತೀನಿ....[ಕೈ ಗಡಿಯಾರ ನೋಡಿಕೊಂಡು] ಹೋ !....ಆಫೀಸ್‌ಗೆ ಟೈಂ ಆದೀತು....ಅಕ್ಕೀನಾದ್ರೂ ತೊಳ್ದಿಡೋಣ. ಅವಳು ಬರೋಹೊತ್ತಿಗೆ....[ನಿರ್ಗಮನ[

[ಕೃಷ್ಣಾಂಜನದ ಪೆಟ್ಟಗೆ ಹಿಡಿದು ನಾಗಜ್ಜಿ ಪ್ರವೇಶ]

ನಾಗಜ್ಜಿ: [ಪ್ರವೇಶಿಸುತ್ತಾ].... ಸುಂದ್ರೂ....ಸುಂದ್ರೂ....[ಸ್ವಗತ] ಯಾರು ಇದ್ಹಾಗೆ ಇಲ್ವಲ್ಲಾ ; ....ಹೆಂಗಸರೆಲ್ಲೋ ಒಳಗೆ ಅಡಿಗೆ ಮಾಡ್ತಿರಬಹುದು. [ಪ್ರಕಾಶ] ಸುಂದ್ರೂ....ಸುಂದ್ರೂ.... [ಸ್ವಗತ] ಇದೇ ಮನೆಯೋ? ಅಲ್ವೋ....[ಪ್ರಕಾಶ] ಸುಂದ್ರೂ

ಸುಂದ್ರು: [ಒಳಗಿನಿಂದಲೇ] ಯಾರದು ?

ನಾಗಜ್ಜಿ: ಅಸಿಸ್ಟೆಂಟ್ ಕಮಿಾಷನರ್ ಸುಂದರರಾಯರ ಮನೆ ಇದೇ ಏನಪ್ಪಾ ?

ಸುಂದ್ರು: [ಪ್ರವೇಶಿಸಿ] ಓ !! ಇದೇನಮ್ಮಾ !!....ಬಾ ಅಮ್ಮಾ !

ನಾಗಜ್ಜಿ: ಸುಂದ್ರೂನೇನೋ....ಗುರುತೇ ಸಿಗೋಲ್ವಲ್ಲೋ !!

ಸುಂದ್ರು: ಅದಿರ್ಲಿ !....ಇದೇನಮ್ಮಾ ಇದ್ದಕ್ಕಿದ್ದಹಾಗೇ ಬಂದ್ಬಿಟ್ಟೆ ?

ನಾಗಜ್ಜಿ: ಯಾಕ್ ಬರ್ಬಾರದಾಗಿತ್ತೇನಪ್ಪಾ ?

ಸುಂದ್ರು: ಛೇ !....ಹಾಗೇನಿಲ್ಲಮ್ಮಾ....ಅಲ್ಲಾ .... ಕಾಗ್ದಾಗೀಗ್ದಾ ಬರೀದೆ ಬಂದ್ಬಿಟ್ಟಿದ್ದೀಯಲ್ಲಾಂತ ?

ನಾಗಜ್ಜಿ ಎರಡುಸಲಾ ಕಾಗದ ಬರ್ದಾಗ್ಲೂ....“ಈಗ್ ಬರ್ಬೇಡಾ... ನಾನು ಊರಲ್ಲಿರೊಲ್ಲಾ” ಅಂತ ಬರ್ದಿ. ಇನ್ ಕಾಗದ ಬರ್ದರೆ ಎಲ್ಲಿ ಬರಬೇಡಾ ಅಂತಿಯೋ ಅಂತ ಇದ್ದಕಿದ್ದ ಹಾಗೇ ಹೊರಟು ಬಂದ್ಬಿಟ್ಟೆ....[ಕೈಯಲ್ಲಿದ್ದ ಸೌಟು ನೋಡಿ] ಅಡಿಗೆ ಮನೇ ಆಡಳಿತವೆಲ್ಲಾ ನಿಂದೇ ಅಂತ ಕಾಣುತ್ತೇ ?

ಸುಂದ್ರು: [ದಿಗ್ಭ್ರಾಂತನಾಗಿ] ಛೇ ! ಛೇ !!....ಹಾಗೇನಿಲ್ಲವಮ್ಮಾ ಇವೊತ್ತು ಒಂದುದಿನ ಅಷ್ಟೇ

ನಾಗಜ್ಜಿ: ಒಂದು ದಿನವೇನೂ....ಖಾಯಂ ಆಗಿ ವಹಿಸಿಕೊಂಡ್ರೆ ತಾನೆ ತಪ್ಪೇನು.

ಸುಂದ್ರು: ಛೇ....ಹಾಗೇನು ಇಲ್ಲಮ್ಮಾ;....ಅವಳು ಅಡಿಗೆ ಎಷ್ಟು ಚನ್ನಾಗಿ ಮಾಡ್ತಾಳೆ ಅಂತೀಯಾ;....ಇವೊತ್ತೆಲ್ಲೋ ಪೇಟೇಗೆ ಬಳೆ ತರೋಕ್ ಹೋಗ್ಬೇಕೂ ಅಂದ್ಳು.

ನಾಗಜ್ಜಿ: ನಿಂಗ್ ತೊಡಿಸೋಕೇನೋ ?

ಸುಂದ್ರು: ಯಾಕೋ ವಿಚಿತ್ರವಾಗಿದೆಯಮ್ಮ ನಿನ್ಮಾತು.

ನಾಗಜ್ಜಿ: ವಿಚಿತ್ರವೇನೂ....ಎಲ್ಲಾ ಸಚಿತ್ರವೇ. ನಿನ್ನ ಸಂಸಾರದ ವಿಷಯವೆಲ್ಲಾ ನಿನ್ನ ಅಣ್ಣನ ಮೂಲಕ ತಿಳೀತಾ ಇದೆ.

ಸುಂದ್ರು: ಏನೂ ! ನನ್ನ ಸಂಸಾರದ ಗುಟ್ಟು ವಿಶ್ವನಾಥನಿಗೂ

ಗೊತ್ತಾಗ್ಬಿಟ್ಟಿದೆಯೇ ?

ನಾಗಜ್ಜಿ : ವಿಶ್ವನಾಥನಿಗೆ ಏನೂ....ಇಡೀ ವಿಶ್ವಕ್ಕೇ ಗೊತ್ತಾಗಿದೆ. ನಿನ್ನ ಜುಟ್ನೆಲ್ಲಾ ಅವಳ ಕೈಗೊಪ್ಪಿಸಿಬಿಟ್ಟು 'ನಮೋನ್ನಮಃ' ಅಂತ ಕೂತಿರೋದು........(Simpathy) ಅಲ್ವೋ ನಿನ ಗೇನು ಬಂತೋ ಗ್ರಹಚಾರ!....ಮದ್ವೇಗ್ಮುಂಚೆ 'ಹುಲಿ' ಇದ್ದಾಗ್ ಇದ್ದೋನು....ಮದ್ವೆಯಾಗತ್ಲೂ 'ಇಲಿ' ಹಾಗಾಗ್ಬಿಟ್ಟೆಯಲ್ಲೋ;....ಅವರೆಲ್ಲಾ ಹೇಳಿದ್ ನಾನ್ ನಂಬಿರಲಿಲ್ಲಾ. ಆದ್ರೇ....ನಿನ್ನ ಕೈಲಿರೋ ಈ ಸೌಟು ನೋಡಿದ್ಮೇಲ್ ಸಿದ್ಧಾಂತವಾಯ್ತು.

ಸುಂದ್ರು: ಅದೆಲ್ಲಾ ಸುಳ್ಳಮ್ಮಾ;....ಪಾಪ! ಅವಳೆಂಥಾ ಒಳ್ಳೇ ಹುಡುಗೀ ಅಂತೀ....ನನ್ನ ನೋಡಿದೇಟಿಗೆ "ಥರಥರಾ" ಅಂತ ನಡುಗ್ತಾಳೆ.

ನಾಗಜ್ಜಿ : ಅಯ್ಯೋ!....ಸುಮ್ಮನಿರು. ಮಲೇರಿಯಾ ಬಂದ್ರೇ ಮೈ ನಡುಗೋಲ್ಲ. ಇನ್ನು ನಿನ್ನ ನೋಡಿದ್ರೆ ನಡುಗ್ತಾಳೇನೋ ....ಎಲ್ಲಾ ವಿಷಯ ನನಗ್ಗೊತ್ತು....ನನಗೇ ಏನೂ....ಈ ಊರೂರ್ಗೆ ಗೊತ್ತು. ಸುಮ್ನೆ ಮುಚ್ಚಿಟ್ರೆ ಏನ್ ಸುಖ. ನಾನು ಹೇಳಿದ್ದಾಗೆ ಕೇಳಲಿಲ್ಲ. "ಎಂ. ಎ. ಮಾಡಿದ್ದಾಳೇ. ತೆಳ್ಗೆ ಬೆಳ್ಗೆ ಇದ್ದಾಳೆ" ಅಂತಾ ಆ ಎಮ್ಮೆಗೇ ತಾಳಿ ಕಟ್ಟಿ ಮುಖಕ್ಕೆ ಬೂದಿ ಬಳ್ಕೊಂಡೇ ನಿನ್ಮುಖಕ್ಕೆ ಮಂಕುಬೂದಿ ಎರಚಿದಳು.

ಸುಂದ್ರು: ಹೌದಮ್ಮಾ ನಿನ್ನ ಮಾತು ಕೇಳಲಿಲ್ಲ.

ನಾಗಜ್ಜಿ : ಹಾಗ್ಬಾದಾರಿಗೇ .... ನಾನ್ಹೇಳ್ದೆ 'ಲೋ, ಆ ಹೆಡ್ಮಾಸ್ಟರ್ ಹನುಮಂತರಾಯರ ಮಗಳು ವೆಂಕಟಲಕ್ಷ್ಮೀನ ಮದ್ವೆ ಮಾಡ್ಕೊಳ್ಳೋ....ಚೆನ್ನಾಗಿದ್ದಾಳೆ" ಅಂತ "ಅವಳು ಶುದ್ಧ ಹಳ್ಳಿ....ಅವರಪ್ಪ ಪಾಪರ್" ಅಂತ ಏನೇನೋ ಅಂದ್ಬಿಟ್ಟೆ.

ಈಗ ನೋಡು. ಅದೇ ವೆಂಕಟಲಕ್ಷ್ಮಿ ನಮ್ಮೂರು ಶಾನು ಭೋಗರ ಮಗನ್ನ ಮದ್ವೆಯಾಗಿ ಎಷ್ಟು ಸುಖವಾಗಿದ್ದಾಳೆ. ಮದ್ವೆಯಾದ್ ವರ್ಷಕ್ಕೆಲ್ಲಾ ಒಂದು ಗಂಡು ಮಗು.

ಸುಂದ್ರು: [ನಿಟ್ಟುಸಿರು ಬಿಟ್ಟು] ಹುಂ!....ಅದೆಲ್ಲಾ ಇರ್ಲಿ ಈಗ ಒಳಗ್ಹೋಗಿ ಸ್ನಾನಗೀನ ಮಾಡಿ ಫಲಹಾರ ಆಗ್ಲಿ.

ನಾಗಜ್ಜಿ: ಏನಾದ್ರೂ ತಿಂಡೀಗಿಂಡಿ ಮಾಡ್ತಾ ಇದ್ದೀಯೇನೋ?

ಸುಂದ್ರು: ಏನಿಲ್ಲಮ್ಮಾ,....ಬೇಳೆ ಬೆಯ್ತಾ ಇತ್ತು. ಬದನೇಕಾಯಿ ಅಚ್ತಾ ಇದ್ದೆ.

ನಾಗಜ್ಜಿ: ಅಯ್ಯೋ,....ಕರ್ಮಾ ಕರ್ಮಾ; ಆ ಸೌಟು ಕೆಳಗಿಟ್ಟು ಬಾಣಸಿಗನ ವೇಷ ಬದಲಾಯಿಸಿ, ಬೇರೆ ಬಟ್ಟೆ ಹಾಕ್ಕೋ ಹೋಗು [ಸೌಟು ಕೆಳಗಿಡುವನು. ನಾಗಜ್ಜಿ ಆ ಸೌಟು ತೆಗೆದು ಕೊಂಡು ಒಳಗೆ ಹೋಗುವಳು] ಅದೇನ್ ಮಾಡಿದ್ದೀಯೋ ಅಡಿಗೆ ಮನೇಲಿ ನೋಡೋಣ.

ಸುಂದ್ರು: [ಶತಪಥ. ಸ್ವಗತ] ಇದೀಗ್ ಸರಿಹೋಯ್ತು. ಈ ಊರ್ನಲ್ಲಿ ಮಾತ್ರ ನನ್ನ ಮಾನ ಹೋಗಿದೇ ಅಂತಿದ್ದೆ.... ಈ ಊರ್ ಟೋಲ್‌ಗೇಟ್ ದಾಟಿಯೂ ಹೊರಟು ಹೋಗಿದೆ!....ಅಮ್ಮ ಹೇಳಿದ ಹಾಗೆ ಆ ವೆಂಕಟಲಕ್ಷ್ಮೀನ ಮದುವೆಯಾಗಿದ್ದರೆ ಯಾವ ಸಂಕಟವೂ ಇಲ್ದೆ ಇರಬಹುದಾಗಿತ್ತು. ಹುಂ! ಮಿಂಚಿ ಹೋದ್ದನ್ನ ಚಿಂತಿಸಿ ಫಲವೇನು. ಇನ್ನುಳಿದಿರೋದೊಂದೇ ಮಾರ್ಗ. ಇವಳ್ನ ಹೇಗಾದ್ರೂ ಮಾಡಿ ದಾರಿಗೆ ತರೋದು. ಇನ್ನು ಅಮ್ಮಾ ಬೇರೆ ಬಂದಿದ್ದಾಳೆ....ಇವಳು ಮನೇಗ್ ಬಂದ ತಕ್ಷಣ War declare ಏ ....ಒಳ್ಳೆ ಪ್ರಾಣ ಸಂಕಟ.

[ಅಷ್ಟರಲ್ಲಿ ಸುಬ್ಬು ಮತ್ತು ಲೀಲಾ ಪ್ರವೇಶ]

ಸುಬ್ಬು: [ಪ್ರವೇಶಿಸುತ್ತಾ] ಹಲೋ....ಬಾಯ್....

ಸುಂದ್ರು: [ಚಕಿತ] ಹೋ !....ಸುಬ್ಬು !!....ಮಿಸ್ ಲೀಲಾ ಕೂಡಾ!! ಬನ್ನೀ,....ಯಾವಾಗಯ್ಯ ಬಂದೆ ಕುಣಿಗಲ್‌ನಿಂದ ?

ಸುಬ್ಬು: ಇಕೋ....ಈಗಲೇ.

ಲೀಲಾ: ಸೌಖ್ಯವಾಗಿದ್ದೀರ ಮಿ॥ ಸುಂದರ್ ?

ಸುಂದ್ರು: ಮದುವೆಯಾದೋರ್ನ ಆ ಮಾತು ಕೇಳಬೇಡಿ.

ಲೀಲಾ: ಯಾಕೋ ವಿಚಿತ್ರವಾಗಿದೆಯಲ್ಲಾ ನಿಮ್ಮ ಮಾತು ।

ಸುಂದ್ರು: ವಿಚಿತ್ರವೇನೂ ಇಲ್ಲ. ಒಂದುದಿನ ನಮ್ಮನೇಲಿದ್ರೆ ಎಲ್ಲಾ ಸಚಿತ್ರವಾಗಿಯೇ ಗೊತ್ತಾಗುತ್ತೆ....ಏಕೆ....ಸುಬ್ಬು ವಿಷಯ ತಿಳಿಸಿರಬೇಕಲ್ಲ.

ಲೀಲಾ: ತಿಳಿಸಿದ್ರೂ ಅನ್ನಿ.... ಆದ್ರೆ ನಾನು ನಂಬಿರಲಿಲ್ಲ!

ಸುಬ್ಬು: ಅದಿರ್ಲಿ;.... ನಿನ್ನ Dear Darling **ಮಿಸೆಸ್** ಹೇಗಿದ್ದಾರಯ್ಯಾ ?

ಸುಂದ್ರು: Not **ಮಿಸೆಸ್** ಸುಬ್ಬು;....**ಮೊಸಳೆ**....ಭಾರಿಮೊಸಳೆ;..... ಈ ಸಂಸಾರ ಸಾಗರದಲ್ಲಿ ಸೇರ್ಕೊಂಡು ನನ್ನ ಅರ್ಧ ನುಂಗಿ ನೀರ್ ಕುಡಿಸ್ತಾ ಇದೆ ಸುಬ್ಬೂ. ಆ ಗಜೇಂದ್ರ 'ಮೊಸಳೇಬಾಯಿಂದ ಪಾರುಮಾಡಿ ಮೋಕ್ಷ ಕೊಡು' ಅಂತ ಮೊರೆ ಇಟ್ಟಾಗೇ ನಾನೂ ಆ ದೇವರಲ್ಲಿ 'ಸ್ವಾಮೀ ಈ ಮೊಸಳೆ ಬಾಯಿಂದ ಪಾರುಮಾಡು,' ಅಂತಾ ಮೊರೆ ಇಡ್ತಾ ಇದ್ದೀನಿ ಸುಬ್ಬೂ.

ಸುಬ್ಬು: [ಹಾಸ್ಯಾಸ್ಪದ] ಭಕ್ತಾ....ಚಿಂತಿಸಬೇಡ;....ನಿನ್ನನ್ನು ಈ ಹೆಣ್ಣು ಮೊಸಳೆ ಬಾಯಿಂದ ಪಾರು ಮಾಡುವ ಸಲುವಾಗಿಯೇ ಈ 'ಏಕಾದಶವತಾರ' ತಾಳಿ ಪ್ರತ್ಯಕ್ಷನಾಗಿದ್ದೇನೆ. ಬೇಕಾದುದನ್ನೆಲ್ಲಾ ಬೇಡಿಕೋ.

ಸುಂದ್ರು: ಸಾಕು ಸುಮ್ಮನಿರಯ್ಯಾ ನಿನ್ನ ಹಾಸ್ಯ.

ಸುಬ್ಬು: [ನಗುತ್ತ] ಅಯ್ಯೋ.... ಗಂಡ್ಸೇ.... ಗಂಡ್ಸೇ;....ಹೆಂಗಸಿಗೆ ಹೆದರಿ ಸಾಯ್ತಾ ಇದ್ದೀಯಲ್ಲೋ....ನಿನ್ನ ಈ ಅವತಾರ ನೋಡು! ಮೀಸೆ ಬೇರೆ ಈ ಮುಖಕ್ಕೆ....**ಹೇಪೆಕ್ಗ್ಯಾಕೋ ಹಿಟ್ಲರ್ ಮೀಸೆ** ಕಿತ್ತೊಗೆಯೊ........ಕಾಲೇಜ್‌ನಲ್ಲಿ ಹೀರೊ....ಕ್ರಿಕೆಟ್ ಕ್ಯಾಪ್ಟನ್;.... ಇನ್ನು ನಾಟಕಗಳಲ್ಲೋ.... ಹ್ಯಾಮ್ಲೆಟ್, ರೋಮಿಯೋ, ಸೀಸರ್;....ಮದ್ವೆಯಾದ್ ಮೇಲೆ....ಉತ್ತರ.. ಶಿಖಂಡಿ....ಷಂಡ. ಥೂತ್ ನಾಚಿಗ್ಗೇಡು.

ಸುಂದ್ರು: [ಸಾವಧಾನವಾಗಿ] ಬಯ್ಯೋ.... ಚೆನ್ನಾಗ್ ಬಯ್ಯೋ ಬಾಯ್ತುಂಬಾ ಬಯ್ಯೋ; ಎಷ್ಟಾದ್ರೂ ಇನ್ನೂ ಮದುವೆಯಾಗದ ಹಸುಳೆ. ಹೆಂಡ್ತಿ ಬಂದಿಲ್ಲ. ಅನುಭವ ಇಲ್ಲದ ಅಲ್ಪ;.... ಸುಬ್ಬೂ ಈ ಜೂರತ್ತೆಲ್ಲಾ ಮದ್ವೆಯಾಗೋವರ್ಗೂ-ಆಮೇಲೆ ಆ ಹೆಂಡ್ತೀ ಅನ್ನೋ ಹೆಬ್ಬುಲಿ ಮನೇಗ್‌ಬಂದ್ಮೇಲೆ ನಿನೂ ನನ್ನ ಹಾಗೆ ಕುರಿ ಕಣೋ ಕುರಿ.

ಲೀಲಾ: ಪಾಪ! ಹೆಂಡ್ತೀನ್ ನೋಡಿದ್ರೆ ಬಹಳ ಹೆದರೋಹಾಗಿದೆ

ಸುಬ್ಬು: ಹೆಂಡ್ತೀನೇ ಏನೂ....ಇಡೀ ಹೆಂಗಸ್‌ಜಾತಿಗೆ ಬೆದರ್ ಬೀಳ್ತಾನೆ.

ಸುಂದ್ರು: ಮಿಸ್ ಲೀಲಾ, ನಾನು ಹೆದರೋದು ನನ್ನ ಹೆಂಡ್ತೀಗಲ್ಲಾ ಹೆಂಗಸಿಗಲ್ಲಾ;....ಮಾನಕ್ಕೆ....ಮರ್ಯಾದೇಗೆ; ಮಾನ ಹೋದ್ಮೇಲೆ ಮನುಷ್ಯ ಮೂರ್ಕಾಸಿಗೂ ಕಡೆ.

ಲೀಲಾ: ಎಲ್ಲಾ ವಿಷಯವೂ ಗೊತ್ತಾಯ್ತು ಮಿ॥ ಸುಂದರ್. ಆದ್ರೆ ನಿಮ್ಮ Wifeಉ ಪತಿ ಅನ್ನೋ Simpathy ಇಲ್ದೆ ಹೀಗೆ Behave ಮಾಡೋದ್ ನನಗ್ಯಾಕೋ ಸರಿತೋರೋಲ್ಲ. ಮೊನ್ನೆ ನಡೆದ ವಿಷಯವಂತೂ ಕೇಳಿ ನನಗೆ ಬಹಳ ವ್ಯಥೆಯಾಯ್ತು.

ಸುಬ್ಬು: ಏನ್ ವಿಷಯ ?

ಲೀಲಾ: ನಿಮಗ್ಗೊತ್ತಿಲ್ವೇನೂ ?

ಸುಬ್ಬು: ಇಲ್ವಲ್ಲಾ.

ಲೀಲಾ: ಮೊನ್ನೆ ಮಹಿಳಾ ಸಮಾಜದ ಪ್ರೆಸಿಡೆಂಟ್ ಪಂಕಜಮ್ಮನ ಮನೇಲಿ ಡಿನ್ನರ್ ನಡೀತು. ಆಗ ಮಿ॥ ಸುಂದರ್, ಹೆಂಡ್ತೀನ ಕಾರ್‌ನಲ್ಲಿ ತಾವೇ ಡ್ರೈವ್ ಮಾಡಿಕೊಂಡು ಬಿಟ್ಟೆಟ್ ಬರೋಕೆ ಹೋಗಿದ್ರು. ಡಿನ್ನರ್ ಎಲ್ಲಾ! ಆದ್ಮೇಲೆ ಪಾಪ....ಮಿ॥ ಸುಂದರ್‌ನ ಡ್ರೈವರ್‌ಗಳ ಪಂಗ್ತಿಯಲ್ಲಿ ಕೂಡಿಸಿ ಊಟಾಹಾಕಿಸೋದೇ !!

ಸುಬ್ಬು: Really So !!!

ಲೀಲಾ: ಕೇಳಿ ಬೇಕಾದ್ರೆ ಅವರ್ನೇ!

ಸುಬ್ಬು: ನಿಜಾನೇನೋ ಸುಂದ್ರು?... [ಸುಂದ್ರುವಿನಿಂದ ಉತ್ತರವಿಲ್ಲ] ಅಯ್ಯೋ....ನಿನ್ನನೋಡಿದ್ರೆ "ಈವ್ಸ್"ಗೆ ಈಲ್ಡಾಗಿರೋ ಈಡಿಯಟ್ ಅಂತ ಇರಿಟೇಟೂ ಆಗುತ್ತೇ....at the same time ನಿನ್ನ Position ನೋಡಿದ್ರೆ 'ಪಾಪ' ಅಂತ ಪಶ್ಚಾತ್ತಾಪವೂ ಮೂಡುತ್ತೆ.

ಸುಂದ್ರು: ನಿನ್ನ ಸಿಟ್ಟೂ–ಸಿಂಪತಿ ಎಲ್ಲಾ ಇರ್ಲಿ....ಮೊದಲು ಈ Wife ಅನ್ನೊ Wolf ನಿಂದ ನನ್ನ ತಪ್ಪಿಸೋ ಉಪಾಯ ಏನಾದ್ರೂ ಇದ್ರೆ ಹೇಳು.

ಸುಬ್ಬು: ಆ Plan Prepare ಮಾಡ್ಕೊಂಡೇ ನಾನೂ ಲೀಲಾ ಬಂದಿರೋದು.

ಸುಂದ್ರು: ಏನ್ ಪ್ಲಾನಯ್ಯಾ ಅದು ?

ಸುಬ್ಬು: ನೀನು ಇನ್ನೊಂದ್ ಮದ್ವೇಗ್ ತಯಾರಾಗಬೇಕು.

ಸುಂದ್ರು: [ಕೋಪ] Get out. You Idiot ; ಒಂದ್ಮದ್ವೇ ಮಾಡ್ಕೊಂಡೇ ಮೂರ್ಲೋಕ ನೋಡ್ತಾ ಇದೀನಿ. ಇನ್ನೊಂ

ದ್ ಮದ್ವೆ ಮಾಡ್ಕೊಳ್‌ಬೇಕಂತೆ. ಮದ್ವೇ ಅನ್ನೋ ಮೂರಕ್ಷರ ಕೇಳತ್ಲೂ ನನ್ನ ಮೈಯೆಲ್ಲಾ 'ಝುಂ' ಅಂತ Shock ಹೊಡೆದ್ಹಾಗಾಗುತ್ತೆ.

ಲೀಲಾ: ಸುಬ್ಬೂ ಹೇಳೋದ್ ನಿಜಾಂತ ತಿಳ್ಕೊಂಡ್‌ಬಿಟ್ರಾ. ಮಿ|| ಸುಂದರ್ ಅನಸ್ಬೋಳೋ ಮದ್ವೇ Marriage without maidಊ.

ಸುಂದ್ರು: [ಚಕಿತ] Marriage without Maidಊ!!!

ಸುಬ್ಬು: ಹೂಂ! Man without man-hoodಉ ಇದ್ಹಾಗೆ.

ಸುಂದ್ರು: ನನಗ್ಯಾಕೋ ಒಂದೂ ಅರ್ಥವಾಗ್ತಾ ಇಲ್ವಲ್ಲಾ!

ಸುಬ್ಬು: ಈಗಾಗಿರೋ ಅನರ್ಥ ತಪ್ಪಿಸೋದೋ ಇದರ ಅರ್ಥ. ನಿನ್ನ ಹೆಂಡ್ತಿ 'ಎಂ.ಎ' ಅಂದ್ರೇ 'ಮಾಸ್ಟರ್ ಆಫ್ ಆರ್ಟ್ಸ್' ಮಾತ್ರಾ ಅನ್ನೋದು ಮರೆತು "ಮಾಸ್ಟರ್ ಆಫ್ ಆಲ್" ಅಂತಾ ತಿಳ್ಕೊಂಡು "ಸ್ತ್ರೀಯರಿಗೆ ಸ್ವಾತಂತ್ರ್ಯ ಸಾಧಿಸಿಕೊಡ್ತೀನಿ; ಸ್ವರ್ಗಸುಖ ಸವಿಸ್ತೀನಿ; ಹಿಂದೂ ಕೋಡ್ ಬಿಲ್ ತಿದ್ದುಪಡಿ ಆಗಲೇಬೇಕು; ಸ್ತ್ರೀಯರಿಗೆ ಡೈವೊರ್ಸ್-ಡಿವಿಡೆಂಟು ಹಕ್ಕು ಬೇಕೇಬೇಕು; ಅಲ್ಲಿಯವರೆವಿಗೆ ಹೆಂಗಸರು ಗಂಡಸರ ಗುಲಾಮರು" ಅಂತ ಸಿಕ್ಕಿಸಿಕ್ಕಿದ ಕಡೆ ಭಾಷಣ ಮಾಡ್ತಾ....ಹಾಲ್ನಂತಾ ನಿನ್ನ ಹೊಸ ಸಂಸಾರದಲ್ಲಿ ಹುಳಿ ಹಿಂಡಿ, ಗಂಡನ ಯೋಗಕ್ಷೇಮಾ ಕೂಡಾ ನೋಡ್ದೆ ನಿನ್ನ ಕೈಲಿ ಸೌಟು ಹಿಡಿಸಿದಳಲ್ಲೋ. ಇಷ್ಟೂ ಸಾಲ್ದೂ ಅಂತ ನಂದ ಗೋಕುಲದ ಹಾಗಿರೋ ನೂರಾರು ಸಂಸಾರಗಳ್ನ **ನೊಂದ ಗೋಕುಲ**ವನ್ನಾಗಿ ಮಾಡ್ತಾ ಇದ್ದಾಳಲ್ಲೋ ಆ ನಿನ್ನ ಹೆಂಡ್ತೀಗೆ ಸರಿಯಾಗಿ ಬುದ್ಧಿ ಕಲಿಸಿ 'ಸ್ತ್ರೀಯರ ನೈಜ ಸುಖ, ಸ್ವಾತಂತ್ರ್ಯ. ಪತಿಯ ಪ್ರೇಮದಲ್ಲಿ, ಪತಿಯ ಜೊತೆಯ ಬಾಳಿ

ನಲ್ಲಿ. ಗಂಡನ ಗೃಹದಲ್ಲಿ' ಅನ್ನೋದನ್ನ ತೋರಿಸಿ ಕೊಡೋಕೆ ಹೊಡಿರೋ ನಾಟಕ ಇದು. ಈ ನಾಟಕದಲ್ಲಿ ನೀನೇ ಹೀರೋ ;....ಲೀಲಾ ಹೀರೋಯಿನ್. ನಾನೂ....ನಿನ್ನ ಸೋದರಮಾವ Cum ಹೆಣ್ಣ್ ಕೊಡೋಕ್ ಬರೋ ಮಾವ. ನಿನ್ನ್ ಹೆಂಡ್ತಿ ಮನೇಗ್ ಬಂದೇಟಿಗೆ ನಾಟಕ ಆರಂಭ.... ಈಗರ್ಥ ಮಾಡ್ಕೋ ಎಲ್ಲಾನೂ.

ಸುಂದ್ರು: ಅರ್ಥವಾಯ್ತು ಸುಬ್ಬೂ ಅರ್ಥವಾಯ್ತು. ನಿನ್ನ ನಾಟಕ ದಲ್ಲಿ ಪಾತ್ರವಹಿಸೋಕೆ ನಾನೇನೋ ಸಿದ್ಧ. ಆದ್ರೇ ನಾಟಕ Tragidy ಆಗ್ದೇ ಸುಖಾಂತವಾಗಬೇಕೂ ಅಷ್ಟೇ.

[ಅಷ್ಟರಲ್ಲಿ ನಾಗಜ್ಜಿ ಪ್ರವೇಶ]

ನಾಗಜ್ಜಿ: [ಪ್ರವೇಶಿಸುತ್ತಾ] ಸುಂದ್ರೂ....ಸುಂದ್ರೂ.... (ಸಮೀಪಿಸಿ) ಆಫೀಸ್‌ಗೆ ಹೊತ್ತಾಗಲಿಲ್ವೆನೋ ?

ಸುಂದ್ರು ಹೊತ್ತಾಯ್ತಮ್ಮಾ.

ಸುಬ್ಬು: ನಮಸ್ಕಾರ ನಾಗಜ್ಜೀ....ಚನ್ನಾಗಿದ್ದೀರಾ ?

ನಾಗಜ್ಜಿ: (ಗುರುತು ಹಿಡಿಯಲಾರದೆ) ಯಾರು ?

ಸುಂದ್ರು: ಸುಬ್ಬೂನಮ್ಮಾ.

ನಾಗಜ್ಜಿ: ಶಾರದಮ್ಮನಮಗ ಸುಬ್ಬೂನೇ....?

ಸುಂದ್ರು: ಹೌದಮ್ಮಾ.

ನಾಗಜ್ಜಿ: ಎಷ್ಟು ಎತ್ತರ ಬೆಳೆದು ಬಿಟ್ಟಿದ್ದಿಯೋ.... ಗುರುತೇ ಸಿಗೋಲ್ವಲ್ಲೋ....(ಲೀಲಾಕಡೆ ದಿಟ್ಟಿಸಿ ನೋಡಿ) ಇವ್ಳೇ ಅಂತ ಕಾಣುತ್ತೇ ನಿನ್ನ ಸರ್ವಾಧಿಕಾರಿ ?

ಸುಂದ್ರು: ಇಲ್ಲಮ್ಮಾ....ಸುಬ್ಬೂಗಿನ್ನೂ ಮದುವೆಯಾಗಿಲ್ಲ.

ನಾಗಜ್ಜಿ: ಈ ಹುಡುಗಿ ಯಾರು?........ನಮ್ಮ ಮೀನಾಕ್ಷಿ ಪ್ರತಿ ರೂಪವಲ್ಲೋ !

ಸುಬ್ಬು: ಇಲ್ಲಾಜ್ಜಿ,.....ಈಕೆ ನಮ್ಮ ಜೊತೆ ಓದ್ತಾ ಇದ್ದ ಹುಡುಗಿ;.. ನಮ್ಮ ಅಮಲ್ದಾರ್ ಆನಂದರಾಯರ ಮಗಳು.

ನಾಗಜ್ಜಿ: ಹೋ !....ಆನಂದರಾಯರ ಮಗಳೇ !!....**ಆ ನಂ ದ ನಾ ಯ್ತು** ; ಇನ್ನೂ ಮದ್ವೇ ಆಗಿರೋ ಹಾಗಿಲ್ಲ.

ಸುಂದ್ರು: ಇನ್ನೂ ಇಲ್ಲಮ್ಮಾ;....ಎಂ. ಎ. ಓದ್ತಾ ಇದ್ದಾಳೆ.

ನಾಗಜ್ಜಿ: [ಚಕಿತ] ಇನ್ನೂ **ಎಮ್ಮೇನೇ!!!**....ಹಾಗಾದ್ರೆ ಗಂಡನ್ನ ಚನ್ನಾಗಿ ನೋಡ್ಕೊಳ್ತಾಳೆ.

ಸುಂದ್ರು: ಹಾಗೇನಿಲ್ಲಾಮ್ಮಾ. ಹುಡುಗಿ ಈ ಕಾಲದವಳಾದ್ರೂ ಪೂರ್ವದ ಆಚಾರ ವಿಚಾರ ವಿಪರೀತ.

ನಾಗಜ್ಜಿ: ಆಶ್ಚರ್ಯವೇ ಹಾಗಾದ್ರೇ! [ಲೀಲಾ ಕಡೆ ತಿರುಗಿ] ನಿನ್ನ ಹೆಸರೇನೇ ತಾಯಿ ?

ಲೀಲಾ: ಲೀಲಾ ಅಂತ.

ನಾಗಜ್ಜಿ: [ಚಕಿತ] ಲೀಲಾ!!........ಲೀಲವಂತೆ ಏನೋ ಲೋಲ. ಸೀತಾ, ಸಾವಿತ್ರಿ ಅಂತಿಟ್ಕೊಂಡ್ರೇ ನಿಮ್ಮಪಾತಿವ್ರತ್ಯ ಹೊರಟು ಹೋಗುತ್ತೇನೊ ?

ಲೀಲಾ: ನಾನು ಹುಟ್ಟಿದ ಹನ್ನೊಂದನೇ ದಿನಾ ನನಗೆ ಮಾತ್ನಾಡೋ ಶಕ್ತಿ ಇದ್ದಿದ್ರೇ ನಮ್ಮ ಅಮ್ಮಾ ಅಪ್ಪನಿಗೆ "ಸೀತಾ, ಸಾವಿತ್ರಿ" ಅಂತಾನೇ ಹೆಸರಿಡಿ ಅನ್ತಿದ್ದೆ....ಆದರೇ....

ಸುಬ್ಬು: ನಿಮ್ಮಂಥಾ ಹಿರಿಯರಿಟ್ಟ ಹೆಸರೇ ತಾನೆ ಅಜ್ಜಿ

ನಾಗಜ್ಜಿ; ಅದೇನೋ ಸರಿ ಅನ್ನೂ.

ಸುಂದ್ರು: ನಮ್ಮ ಮಿಾನೂ ವಿಷಯವೆಲ್ಲಾ ತಿಳ್ಕೊಂಡು ಅವಳ್ಗೆ

ಸರಿಯಾಗಿ ಬುದ್ಧಿವಾದ ಹೇಳ್ಬೇಕೂಂತಾನೇ ಲೀಲಾ ಬಂದಿರೋದಮ್ಮ.

ನಾಗಜ್ಜಿ: ಗಂಡಾ ಅನ್ನೋ ಗಂಡ್ಸಿಗೇ ಹೆದರದ ಗರತಿ ಇನ್ನು ಹೆಂಗಸಿಗೆ ಹೆದರ್ತಾಳೇನೋ;... ನಿನಗೊಂದು ಭ್ರಾಂತು.

ಸುಬ್ಬು: "ವಜ್ರಂ ವಜ್ರೇನ ಛಿದ್ಯತೇ" ಅಂದ ಹಾಗೆ; ವಜ್ರವನ್ನು ವಜ್ರದಿಂದಲೇ ಕತ್ತರಿಸಬೇಕಜ್ಜಿ. ಅದಕ್ಕೆ ಸಣ್ಣದೊಂದು ನಾಟಕ ಹೂಡಿದ್ದೇವಜ್ಜಿ. ಸುಂದ್ರೂಗೆ ಈ ಲೀಲಾನ ಕೊಟ್ಟು ಎರಡನೇ ಮದ್ವೆಗೆ ಏರ್ಪಾಟುಮಾಡೋ ಹಾಗೂ, ನಾನೇ ಲೀಲಾನ ತಂದೇ ಹಾಗೂ ನಟಿಸಿ ಆಕೇನ ದಾರಿಗೆ ತರೋದು

ನಾಗಜ್ಜಿ: [ಚಕಿತ] ಏನೂ !....ಈ ಹುಡುಗೀನಾ! ಸುಂದ್ರೂಗೆ ಎರಡನೇ ಮದ್ವೇಗ್ ಕೊಡೋ ಹಾಗೆ ನಟಿಸೋದೆ !!

ಸುಬ್ಬು: ಹೌದಜ್ಜಿ.

ನಾಗಜ್ಜಿ: ಬರೀ ನಾಟಕವೋ ಇಲ್ಲ ನಾಟಕ ರೂಪದಲ್ಲಿ ನಿಜವಾದ ಮದುವೆಯೋ ?

ಸುಬ್ಬು: ಇದೇನಜ್ಜಿ ಹೀಗೆ ಅನುಮಾನ ಬೀಳ್ತೀರಾ ?

ನಾಗಜ್ಜಿ: ಅನುಮಾನ ಅಲ್ಲಾ....ಈಗಿನ ಕಾಲದ ಮದುವೆಗಳೂ ನಾಟಕದ ಹಾಗೇ ನಡೆದುಹೋಗುತ್ತೆ.

ಸುಬ್ಬು: ಹಾಗೇನಿಲ್ಲಾಜ್ಜಿ ;....ಸುಂದ್ರೂ ಹೆಂಡ್ತೀಗಿರೋ ಅಹಂಕಾರ ಮುರಿಯೋದೇ ಈ ನಾಟಕದ ಉಪಾಯ.

ನಾಗಜ್ಜಿ: ನಿನ್ನೂ ಲೀಲಾನ್ನೂ ನೋಡಿಲ್ವೇನೋ ಅವ್ನು ?

ಸುಬ್ಬು: ಇಲ್ಲಾಜ್ಜಿ....ನಾನು ಬೆಂಗಳೂರು ಬಿಟ್ಟು ಹೋಗಿ ೧॥ ವರ್ಷ ಆಯ್ತು. ಸುಂದ್ರು ಕಾಗದಗಳ ಮೂಲಕ ಎಲ್ಲಾ ವಿಷಯ ತಿಳಿಸ್ತಾ ಇದ್ದ. ಅವನೂ ಅಲ್ಲೇ ಎರಡುಸಲಾ ಕುಣಿ

ಗಲ್‌ಗೆ ಬಂದಾಗ್ಲೂ ಎಲ್ಲಾ ವಿಷಯಗಳನ್ನು ವಿಷದವಾಗಿ ವಿವರಿಸಿದ್ದ.

ನಾಗಜ್ಜಿ: ಈಗ ನೀನು ಕುಣಿಗಲ್‌ನಲ್ಲಿದ್ದೀಯೇನು?

ಸುಬ್ಬು: ಹೌದಜ್ಜಿ.... ಅಲ್ಲಿ ಡಾಕ್ಟರಾಗಿದ್ದೇನೆ.

ನಾಗಜ್ಜಿ: ಕುದುರೇ ಡಾಕ್ಟರ್ರೇ?

ಸುಬ್ಬು: ಇಲ್ಲಾಜ್ಜಿ, ಮನುಷ್ಯರ ಡಾಕ್ಟರ;.... ಲೀಲಾ ಮೈಸೂರಿನಲ್ಲಿ ಎಂ. ಎ. ಓದ್ತಾ ಇದ್ದಾಳೆ..... ಏನಜ್ಜಿ .... ನಮ್ಮ Plan ಹೇಗಿದೆ? ಇನ್ನು ಕೊಂಚ ಹೊತ್ತಿನಲ್ಲಿ ನಾನು ನಿಮ್ಮ ತಮ್ಮನ ವೇಷ ಧರಿಸಿ ಹಾಜರ್. ಈ ನಾಟಕದ ಸೂತ್ರಧಾರಿಗಳು ನೀವೇ ಅಜ್ಜಿ.

ನಾಗಜ್ಜಿ: ಹೂಂ!.... ನಡೀಲಿ ನಾಟಕ.

ಸುಬ್ಬು: ನಾನಿನ್ನು ಬರ್ತೀನಯ್ಯಾ ಮಿಸ್ಟರ್ **ಎಚ್. ಎಚ್. ಸುಂದರರಾವ್.**

ಲೀಲಾ: [ಚಕಿತ] ಎಚ್. ಎಚ್. ಸುಂದರರ್‍ರಾವೂ!!.... ಅವರ ಇನಿಷಿಯಲ್ **ಎಸ್. ಸುಂದರರಾವ್** ಅಲ್ವೇನ್ರೀ?

ಸುಬ್ಬು: ನಾವಿಟ್ಟಿರೋ ಇನಿಷಿಯಲ್ಸೂ **"ಎಚ್. ಎಚ್."** ಅಂದ್ರೇ **"ಹೆನ್‌ಪೆಕ್ಡ್ ಹಸ್ಬೆಂಡ್** ಸುಂದರ್‌ರಾವ್" ಅಂತ.

ಸುಂದ್ರು: ಹಾಸ್ಯ ಮಾಡೋ........ ಹುಲೀ ಹಳ್ಳಕ್‌ಬಿದ್ದಾಗ್ ಆಳ್ಗೊಂದು ಕಲ್ಲು.

ಸುಬ್ಬು: [ಸುಂದ್ರು ಬೆನ್ನು ತಟ್ಟುತ್ತಾ] ಹೆದರಬೇಡ ಸುಂದ್ರೂ.... ಈ ಹುಲೀನ ಹಳ್ಳದಿಂದ ಮೇಲಕ್ಕೆತ್ತಿ Tiger of the Townಊ ಅಂತ ಟಾಂ ಟಾಂ ಹೊಡಿಸ್ತೀನಿ. [ಬೆನ್ನು ತಟ್ಟುತ್ತಾ]....

courage ಕಳ್ಕೋಬೇಡ comrade....ನಾನಿನ್ನು ಬರ್ತೀನಿ. ....ಬರ್ತೀನಿ ನಾಗಜ್ಜಿ [ನಮಸ್ಕಾರ-ನಿಷ್ಕ್ರಮಣ]

ನಾಗಜ್ಜಿ: ಆಫೀಸ್‌ಗೆ ಹೊತ್ತಾಗಲಿಲ್ವೇನೋ ಸುಂದ್ರೂ?

ಸುಂದ್ರು: ಇವೊತ್ತು ಆಫೀಸ್‌ಗೆ ರಜಾ ತಗೊಂಡಿದ್ದೀನಮ್ಮಾ.

ನಾಗಜ್ಜಿ: ಏಕೆ?....ಏನಾದ್ರೂ ಕೆಲಸ ಹೇಳ್ಬಿಟ್ ಹೋಗಿದ್ದಾಳೇನೋ ನಿನ್ನ ಹೆಂಡ್ತಿ?

ಸುಂದ್ರು: ಏನಿಲ್ಲಮ್ಮಾ....ಇವೊತ್ತು ಅವಳ್ಗೆ ಸರಿಯಾದ್ ಬುದ್ಧಿ ಕಲಿಸಬೇಕೂ ಅಂತ.

ನಾಗಜ್ಜಿ: ಒಂದು ವರ್ಷದಿಂದ್ಲೂ ಇಲ್ಲದ ಗಂಡಸ್ತನ ಒಂದ್ನಿಮಿಷ ದಲ್ಲಿ ಬಂದ್ಬಿಟ್ಟಿದೆಯಲ್ಲಾ!!....ಆಶ್ಚರ್ಯವೇ!!!........ ಹೂಂ ....ನಡೀ ಅವಳಿನ್ನೆಷ್ಟು ಹೊತ್ತಿಗೆ ಬರ್ತಾಳೋ ? ಏನೋ.... ನೀನಾದ್ರೂ ಊಟ ಮಾಡು.

ಸುಂದ್ರು: ಹೂಂ....ನಡಿಯಮ್ಮಾ [ಇಬ್ಬರೂ ಒಳಗೆ ಹೋಗುವರು]

ಮಿೂನೂ: [ಪ್ರವೇಶಿಸಿ-ಒಳಗಿರುವ ಗಂಡನನ್ನುದ್ದೇಶಿಸಿ] ಓಹೋ.... ಏನಿವೊತ್ತು ಅಡಿಗೆ ಜೋರಾಗೇ ಇದ್ದ ಹಾಗಿದೆಯಲ್ಲಾ. ಒಗ್ಗರಣೆ ವಾಸ್ನೇ ಮಗ್ಗಲ್ಮನೇವರ್ಗೂ ನುಗ್ಗಿ ಬರ್ತಾ ಇದೆ. ಒಂದು ದಿನ ನಿಮ್ಮ ಕೈ ಅಡಿಗೆ ಊಟ ಮಾಡಿದ್ರೆ ದಿನಾಗ್ಲೂ ಊಟ ಮಾಡ್ಬೇಕು ಅನಿಸುತ್ತೆ.

ನಾಗಜ್ಜಿ: [ಒಳಗಿನಿಂದ ಪ್ರವೇಶಿಸುತ್ತಾ] ಅದಕ್ಕೇ ಕಟ್ಟಿದ್ದೀಯಲ್ಲಾ ಪಟ್ಟ ; ಇನ್ನೇನೂ ನೀನೇ ಅಸಿಸ್ಟೆಂಟ್ ಕಮಿಾಷನರೂ ಅವ್ನೇ ಅಡಿಗೆಯವನು.

ಮಿೂನೂ: [ಚಕಿತ] ಹೋ !....ನೀವೂ !!

ನಾಗಜ್ಜಿ: [ಕೋಪ] ಹೂಂ....ನಾನೇ.

ಮೀನೂ: ಯಾವಾಗ್ ಬರೋಣವಾಯ್ತೋ ಕಾಶಿಯಿಂದ ?

ನಾಗಜ್ಜಿ : ನೀನ್ ನನ್ನೋಡೋಕ್ ಕೊಂಚ ಹೊತ್ತಿನ್ಮುಂಚೆ.

ಮೀನೂ: ಅಲ್ಲಾ....ಎರಡ್ಸಲಾ ಕಾಶಿಗೆ ಹೋಗ್ಬಂದ್ರೀ!!!

ನಾಗಜ್ಜಿ : ಯಾಕ್ ಹೋಗ್ಬಾರ್ದೇನೂ ?

ಮೀನೂ: ಹೋಗಬಾರದು ಅಂತ ಯಾರು ಹೇಳಿದ್ರೂ.

ನಾಗಜ್ಜಿ : ಹೋದೋರು ವಾಪಸ್ ಬರ್ಬಾರ್ದು ಅಂತ ಹೇಳಿದೆ ಯೇನೋ ?

ಮೀನೂ: ಆಯುಸ್ಸು ತೀರಿದರೆ ಅಡ್ಡಿಯೇನು.

ನಾಗಜ್ಜಿ : ತೀರ್ಲಿಲ್ವಲ್ಲಾ ....ಮುದ್ದಿನಂಥಾ ಮಗನ್ನ ಹದ್ದಿನಂಥಾ ಹೆಣ್ಣಿನ ಕೈಲಿಟ್ಟು ಹೆತ್ತ ಗಂಡು ಹೆಣ್ಣಾಗ್ ಕೂಡೋ ಕರ್ಮ ನೋಡೋದು ಹಣೇಲಿ ಬರೆದಿರುವಾಗ ಚಿತ್ರಗುಪ್ತರ ಚಿತ್ತಕ್ಕೆ ತಾನೇ ಹೇಗೆ ಬರುತ್ತೇ....

ಮೀನೂ: [ಹಂಗಿಸುತ್ತ] ಓಹೋ ! ....ಪಾಪ ...ಮುದ್ದಿನ ಮಗು.... ಬಾಯಲ್ಲಿ ಬೆರಳಿಟ್ಟರೆ ಕಚ್ಚೋಕ್ ಬರೋಲ್ಲ. ಆ ಮಗೂನ ಈ ಹದ್ದಿನಂಥಾ ಹೆಣ್ಣಿನ ಕೈಲಿಟ್ರೀ. ....ಪಾಪ ಆ **ಗಂಡು ಹೆಣ್ಣಾಗ್** ಬಿಡ್ತು.

ನಾಗಜ್ಜಿ : [ಕೋಪ] ಅತ್ತೇ ಎದುರಿಗೆ ನಿಂತು ಉತ್ತರ ಕೊಡೋ ಅಷ್ಟು ಗತ್ತು ಬಂತೇನೆ ನಿನಗೇ....ತಾಳು ಅವನಿಗ್ಹೇಳೀ [ಒಳಗೆ ಹೋಗುತ್ತಾ ಮತ್ತೆ ವಾಪಸಾಗಿ-ನಿರಾಶೆಯಲ್ಲಿ] ಅಯ್ಯೋ.... ಅವನಿಗೆಲ್ಲಿದೆ ನಿನ್ನ ದಂಡಿಸೋ ಧೈರ್ಯ ; ಮೋಡಿಹಾಕಿ ಕೂಡಿಸಿ ಬಿಟ್ಟಿದ್ದೀಯಲ್ಲಾ ;....ಇದಿರ್ಲೀ ನಾನ್ ಯಾಕೀಗ ಬಂದಿರೋದ್ ಗೊತ್ತೇನೇ ?

ಮಿಾನೂ: ನಿನ್ನ ದೊಡ್ಡ ಮಗನ ಹೆಂಡ್ತಿ ತೌರುಮನೆಗೆ ಹೆರಿಗೆಗೆ ಹೋಗಿದ್ದಾಳೇನೋ....ಅಲ್ಲಿ ಯಾರೂ ಜಗಳಾ ಆಡೋಕೆ ಸಿಗದೆ ಇಲ್ಲಿಗೆ ಬಂದಿದ್ದೀರ.

ನಾಗಜ್ಜಿ: ಎಲಾ ಚಿತ್ರಪುಟ್ಟ !!....ಜಗಳಾ ಆಡೋಕೇನೆ ಮಕ್ಕಳ ನ್ಹೆತ್ತು ಮದ್ವೆ ಮಾಡಿರೋದು ?....ತಿಳ್ಕೊಳ್ಳೇ. ಚನ್ನಾಗಿ ತಿಳ್ಕೋ. ನಿನ್ನ ಕೈಲಿ ಸಿಕ್ಕಿ ನರಳ್ತಿರೋ ಆ ನರಪ್ರಾಣೀನ ಈ ನರಕದಿಂದ ಪಾರುಮಾಡೋಕೆ....ಈಗಲಾದ್ರು ತಿಳ್ಕೋ.

ಮಿಾನೂ: ಓಹೋ !....ಈ ನರಕದಿಂದ ಪಾರುಮಾಡಿ ಸ್ವರ್ಗಕ್ಕೆ ಸಾಗಿಸ್ಕೊಂಡ್ ಹೋಗ್ತೀರೋ ?

ನಾಗ:ಜ್ಜಿ ಸಾಯೋಕ್ಮುಂಚೇನೇ ಸ್ವರ್ಗಕ್ಕೆ ಸಾಗಿಸೋಕ್ ಹವಣಿಸ್ತಾ ಇದ್ದೀಯಲ್ಲೇ !!

ಮಿಾನೂ: ಸತ್ಮೇಲ್ ತಾನೇ ನಿಮ್ಮನ್ನ ಸ್ವರ್ಗಕ್ಕೆ ಸೇರಿಸೋರ್‍ಯಾರು. ಸೊಸೇನ ಗೋಳುಹೊಯ್ದು ಕೊಂಡೋರ್ಗೆ ಸ್ವರ್ಗ ಎಲ್ಲಿದೆ. ಅವರಿಗೆ ಸ್ಪೆಷಲ್ ನರಕ ಸಿದ್ಧವಾಗಿರುತ್ತೇ!

ನಾಗಜ್ಜಿ: ನಾಲ್ಗೇಲಿ ಮೂಳೆ ಇಲ್ಲಾಂತ ಬಾಯ್ಗೊಳ್ಗೆಲ್ಲಾ ತಿರುಗಿಸ ಬೇಡ್ವೇ....ನನಗೋ ನಿನಗೋ ನರಕ ಸತ್ಮೇಲ್ ನೋಡೋಣ.

[ಅಷ್ಟರಲ್ಲಿ ಸುಂದ್ರು ಪ್ರವೇಶ]

ಸುಂದ್ರು: [ಸ್ವಗತ) ಓಹೋ !....ಆಗ್ಲೇ ಷುರುವಾಗಿ ಬಿಟ್ಟಿದೇ !! [ಸಮಿಾಪಿಸಿ. ಜೋರಿನಿಂದ ಪ್ರಕಾಶ] ಏನಮ್ಮಾ ಅದು ?

ನಾಗಜ್ಜಿ: ಈ ಅಮ್ಮನ್ನೇನು ಕೇಳ್ತೀ....ಆ“ಅಮ್ಮಾವ್ರೋರ್‍ನ” ಕೇಳು. [ಸುಂದ್ರು ಸುಮ್ಮನೆ ನಿಲ್ಲುವನು] ಯಾಕೋ....ಉಸಿರು ಉಡುಗ್ಹೋಯ್ತೇನೋ ? ಕಲ್ಲಿನ ಪ್ರತಿಮೆ ಹಾಗೆ ಕದಲ್ದೇ ನಿಂತ್ಬಿಟ್ಟೆ. ಅನ್ಯಾಬರದ್ದೆಲ್ಲಾ ಅಂತಾ ಇದ್ದಾಳಲ್ಲೋ.

ಸುಂದ್ರು: (ಜೋರಿನಿಂದ) ಏನೇ ಅಂದೆ ಅಮ್ಮನ್ನ ?

ಮಿೂನೂ: (ಸಿಡಿದು ಬಿದ್ದಾಗೆ, ಆಂ....

ಸುಂದ್ರು: [ತಕ್ಷಣ ಪರ್ವತಕ್ಕೇರಿಸಿದ್ದ ಧ್ವನಿಯನ್ನು ಪಾತಾಳಕ್ಕಿಳಿಸಿ] ಅಲ್ಲಾ ಅಮ್ಮನ್ನ ಏನಂದೀ ಅಂತ?

ಮಿೂನೂ: ಇದು ನರಕವಂತೆ....ನೀವು ನರಕದಲ್ಲಿ ನರಳ್ತಿರೋ ನರ ಪ್ರಾಣಿಯಂತೆ. ನಿಮ್ಮನ್ನ ಈ ನರಕದಿಂದ ಪಾರುಮಾಡೋಕ್ ಬಂದಿದ್ದೀನಿ ಅಂದ್ರು."ಪಾರು ಮಾಡಿ ಸ್ವರ್ಗಕ್ಕೆ ಸಾಗಿಸಿಕೊಂಡು ಹೋಗ್ತೀರಾ" ಅಂದೆ.

ನಾಗಜ್ಜಿ: (ಅಷ್ಟರಲ್ಲಿ ಬಾಯಿ ಹಾಕಿ) ಕೇಳ್ದೇನೋ....ಕೇಳೂ; ನಮ್ಮಿಬ್ಬರ್ನೂ 'ಸಾಯಿ' ಅಂತಾ ಇದ್ದಾಳಲ್ಲೋ.

ಸುಂದ್ರು: ಹಾಗನ್ನಲಿಲ್ವಲ್ಲಮ್ಮಾ.

ನಾಗಜ್ಜಿ: (ವ್ಯಂಗ್ಯವಾಗಿ) ಇನ್ನ್ಹ್ಯಾಗ್ ಅಂದಳಮ್ಮಾ ?

ಸುಂದ್ರು: (ಬೇಸರದಿಂದ) ಹ್ಯಾಗಾದ್ರೂ ಅನ್ಲಿ ಸುಮ್ಮನಿರಮ್ಮಾ. ಇನ್ನೆಷ್ಟು ದಿನ ಅಂದಾಳು. ಅಬ್ಬಬ್ಬಾ ಅಂದ್ರೆ ಇನ್ನೊಂದು ವಾರ ಅಥ್ವಾ ಇನ್ನೆರಡುವಾರ. **ಅವಳು** ಬಂದ್ಮೇಲೆ ಇವಳೆಲ್ಲೀ... ಇವಳ ಬಾಯೆಲ್ಲಿ....ಇವಳ ಜೋರೆಲ್ಲಿ.

ನಾಗಜ್ಜಿ: ಅದೂ ನಿಜವೇ ಅನ್ನು;....ಅಂದ್ಹಾಗೆ ಪುಟ್ಟು ಎಷ್ಟೊತ್ತಿಗೆ ಬರ್ತೀನಿ ಅಂತ ಬರ್ದಿದ್ದಾನೋ?

ಸುಂದ್ರು: ಈ ಸಂಜೆಗೇ ಬಂದ್ಬಿಡ್ತೀನಿ ಅಂತ ತಂತಿ ಕೊಟ್ಟಿದ್ದಾರಮ್ಮಾ

ನಾಗಜ್ಜಿ: ಈ ಸಂಜೆಗೆ ಬಂದ್ಬಿಡ್ತಾನೇ ?....ಹಾಗಾದ್ರೆ ಒಂದಿಷ್ಟು ಕಾಫೀ ತಿಂಡಿನಾದ್ರೂ ಮಾಡ್ತೀನಿ. [ಕೊಂಚ ದೂರ ಹೋಗಿ ವಾಪಸಾಗಿ] ನೋಡೂ, ಅವಳ್ಗೆ ಹೇಳು, 'ನಾನೇಕ್ ಬಂದಿದ್ದೀನಿ, ಪುಟ್ಟು ಯಾಕ್ ಬರೋದು' ಅನ್ನೋದ್ನೆಲ್ಲಾ. [ನಾಗಜ್ಜಿ ನಿರ್ಗಮನ]

ಸುಂದ್ರು: (ಬೇಸರ) ಹೋಗ್ಲೀ....ಊಟಮಾಡು ಹೋಗು.

ಮೀನೂ: ಅದಿರ್ಲಿ....ಅದೇನೋ "ಅವಳ್ಬಂದ್ಮೇಲೆ" ಅಂದ್ರಲ್ಲಾ.... ಆ "ಅವ್ಳು" ಅನ್ನೋಳ್ಯಾರೂ ಅನ್ನೋದನ್ನ ಮೊದಲ್ಹೇಳಿ.

ಸುಂದ್ರು: (ದೀರ್ಘವಾಗಿ) ಅವ್ಳೇ ....?

ಮೀನೂ: ಹೂಂ ! "ಅವ್ಳೇ" ಅವಳ್ಯಾರೂ ಅಂತ?

ಸುಂದ್ರು: ಅವ್ಳು ನಿನ್ನಹಾಗೆ ಒಬ್ಬ ಹೆಂಗ್ಸು....ಹುಡುಗಿ ;....ಈಗ ಮಿಸ್ಸೂ....ಇನ್ನೊಂದ್ ವಾರದಲ್ಲಿ ಮಿಸೆಸ್ಸು.

ಮೀನೂ: "ಅವ್ಳು" ಅಂದ್ರೇ ಗಂಡ್ಸಲ್ಲಾ ಅನ್ನೋ ಪಾಠ ಇವರ್ಗಲ್ಲಾ ಹೇಳ್ಕೊಡೋದು. ಆ ಮಿಸ್ ಆಗಿರೋಳು....ಮಿಸೆಸ್ ಆಗೋಳು...."ಅವ್ಳು" ಯಾರು, ಯಾರಿಗೇ ಅಂತ?

ಸುಂದ್ರು: (ಮೀನಾ ಕಡೆ ತೋರಿಸಿ] ಈ ಮಿಸೆಸ್‌ನ ಮಾಸ್ಟರಿಗೆ 'ಮಿಸೆಸ್ ದಿ ಸೆಕೆಂಡ್' ಆಗೋಳೇ ಆ ಮಿಸ್ಸು.

ಮೀನೂ: ಓಹೋ !....ಎರಡನೇ ಮದ್ವೇಗೋ ಈ ಏರ್ಪಾಟೆಲ್ಲಾ ?

ಸುಂದ್ರು: Undoubtedly So.

ಮೀನೂ: ಯಾರೋ ಆ ಮಿಸೆಸ್ ದಿ ಸೆಕೆಂಡು ?

ಸುಂದ್ರು: ನಾನ್ ಆಗಾಗ್ಲೇ ಹೇಳ್ತಿರಲಿಲ್ವೆ ?....'ಅದೇ ನನ್ನ ಸೋದರಮಾವ....ಬೊಂಬಾಯ್ಲಿದಾರೇ,Social workerಉ, Socieity Refomerಉ, ... Prominent Political Figure ಎಕ್ಸೆಟ್ರಾ; ಎಕ್ಸೆಟ್ರಾ ಅಂತಾ....ಅವರ Daughterಏ ನನ್ನ Dear Darling ಆಗೋದು.

ಮೀನೂ: ಹಾಗಾದ್ರೆ ಎರಡನೇ ಮದ್ವೆಯಾಗೋದ್ ನಿಜಾ ಅನ್ನಿ ?

ಸುಂದ್ರು: ನಿನ್ನಾಣೇಗೂ ನಿಜ.

ಮೀನೂ: ನನ್ಮೇಲ್ ಯಾಕ್ ಆಣೆ ಇಡ್ತೀರಾ.

ಸುಂದ್ರು: ನೋಡು ಮಿಾನೂ....ನಾನೆರಡನೇ ಮದ್ವೇ ಮಾಡ್ಕೊಳ್ಳೋ ದ್ರಿಂದ ನಿನಗೂ ಅನುಕೂಲವಿದೆ.

ಮಿಾನೂ: ಎತ್ತಿಗೆ ಜ್ವರಾ ಬಂದ್ರೇ....ಎಮ್ಮೆಗೆ ಬರೇ ಎಳೆದ್ರಂತೇ. ನಿಮ್ಮ ಸುಖಕ್ಕೆ ಮದ್ವೆಯಾದ್ರೆ ನನಗೇನು ಅನುಕೂಲ ?

ಸುಂದ್ರು: ಅನುಕೂಲವಿದೇ....ನೋಡು, ಆ ನಿನ್ನ ಸಮಾಜಸೇವೆ, ಸ್ತ್ರೀಸ್ವಾತಂತ್ರ್ಯ ಸಾಧನೆ, ಇವಕ್ಕೆಲ್ಲಾ ಸತತವೂ ಸೇವೆ ಸಲ್ಲಿಸೋ ಸದವಕಾಶಸಿಗುತ್ತೆ. ಅಂದ್ಹಾಗೇ....ಈ ಮಧ್ಯೆ ನನ್ನ ದೊಂದು Suggesti onಉ; Rather requestಊ ಅನ್ನು........ನೋಡು ನೀನು "ಈ Do as I say but Dont do as I do" ಅನ್ನೋ ಪಾಲಸಿ ಬಿಟ್ಟು "Do as I say and Do as I do" ಅನ್ನೋ ಪಾಲಿಸಿ ಅನುಸರಿಸಿದರೆ ನೀನು Sincere society Reformerಉ ಅನ್ನೋದು ಸಿದ್ಧಾಂತವಾಗುತ್ತೆ. ಅದರಿಂದ ನೀನೀಗ ಸ್ತ್ರೀಯರಿಗೆ ಬೇಕೂ ಅಂತಿರೋ ಡೈವೊರ್ಸ್ರೂ ಡಿವಿಡೆಂಟೂ ಹಕ್ಕಿನ| ಹೋರಾಟಕ್ಕೂ ಬೆಂಬಲಸಿಗುತ್ತೆ.

ಮಿಾನೂ: ಯಾಕೋ....ನೀವು ಹೇಳೋದೊಂದೂ ನನಗರ್ಥ ವಾಗ್ತಿಲ್ವಲ್ಲಾ.

ಸುಂದ್ರು: To be frank with you....ನೀನು ನನ್ನ ಡೈವೊರ್ಸ್ ಮಾಡಿ ಇತರರಿಗೂ ಮಾರ್ಗದರ್ಶಕಳಾಗೂ ಅಂತ.

ಮಿಾನೂ: [ತೀವ್ರ ಚಕಿತ] ಏನೂ!!....ನಾನು ನಿಮ್ಮನ್ನ ಡೈವೊರ್ಸ ಮಾಡ್ಬೇಕೇ !!! -

ಸುಂದ್ರು: Definetly so; ನೀನು ನನ್ನ ಡೈವೊರ್ಸ್‌ಮಾಡಿ ಆ ಮೇಲೆ Deccent life lead ಮಾಡ್ತಾ ಅಂದ್ರೆ..ಡೈವೊರ್ಸ್ ನಿಂದ ಆಗೋ ಪ್ರತಿಕ್ರಿಯೆಗಳನ್ನೆಲ್ಲಾ ಸಮಾಜಕ್ಕೆ ತೋರಿಸಿ

ಕೊಟ್ಟ ಹಾಗಾಗುತ್ತೆ. ಇನ್ನು ಡಿವಿಡೆಂಟ್ ವಿಷಯದಲ್ಲೋ ನೀನೇನೂ Example ತೋರಿಸೋ ಹಾಗೇ ಇಲ್ಲ.... ಯಾಕೆಂದ್ರೇ....ನಿಮ್ಮ ಅಪ್ಪನಿಗೆ ಆಸ್ತಿಯೇನಾದ್ರೂ ಇದ್ರೇ ತಾನೇ ನೀನು ಭಾಗ ಕೇಳೋದು. ಅವ್ನೇ ೧೨ ಆಣೆ ಚೀಟಿ ತಗೊಂಡಿದ್ದಾನೆ.

ಮೀನೂ: (ಕೋಪ) ಸಾಕ್ ನಿಲ್ಸಿ ನಿಮ್ಮ ಲೆಕ್ಚರು. ಹಕ್ಕಿಗೆ ಹೋರಾಡಿದ ಮಾತ್ರಕ್ಕೇ ಹಕ್ಕು ಚಲಾಯಿಸಬೇಕೂ ಅಂತೇನೂ ಕಟ್ಟಿಲ್ಲ.

ಸುಂದ್ರು: ಕಟ್ಟಿಲ್ಲದಿದ್ರೂ....ಒಂದು ಸಂಸಾರದ ಸುಖದೃಷ್ಟಿಯಿಂದಾದ್ರೂ ಚಲಾಯಿಸ್ಲೇಬೇಕು .... ಮೀನೂ Please Divorce me.

ಮೀನೂ: ಇದೇನ್ ನಿಮಗೆ ಹುಚ್ಚು ಹಿಡಿದಿದೆಯೇ ಅಂದ್ರೇ ?

ಸುಂದ್ರು: ಇನ್ನೂ ಹಿಡಿದಿಲ್ಲಾ....ಹಿಡಿಯೋದ್ರಲ್ಲಿದೇ...ಹಿಡೀತಾನೂ ಇದೇ;....ಅದಕ್ಕೇ ನಾನು requst ಮಾಡ್ಕೊಳ್ತಿರೋದು.... 'Please divorce me' ಅಂತ. Please Meenu

[ಅಷ್ಟರಲ್ಲಿ ಪುಟ್ಟು ವೇಶಧಾರಿ ಸುಬ್ಬು, ಅವನ ಮಗಳು ರತ್ನ ವೇಶಧಾರಿ ಲೀಲ ಪ್ರವೇಶ. ಸುಬ್ಬು ಕಾಂಗ್ರೆಸ್ ನಾಯಕನಂತೆ ಉಡುಪು ಧರಿಸಿ ಗಾಂಧಿ ಟೋಪಿ ಇಟ್ಟು ಕೈಯ್ಯಲ್ಲಿ ಲೆದರ್ ಟ್ರಂಕ್ ಹಿಡಿದಿರುವನು.]

ಹೋ, ಪುಟ್ಟು ಮಾವ !! ರತ್ನಾಕೂಡಾ ಬನ್ನಿ. ಬನ್ನಿ.

ಪುಟ್ಟು: (ಯಾವಾಗಲೂ ದೊಡ್ಡಸ್ತಿಕೆ ಸ್ವರದಲ್ಲೇ ಮಾತು)Excuse me ! ನೀವಿಬ್ರೂ ಮಾತ್ನಾಡ್ತಾ ಇರೋವಾಗ ಗೊತ್ತಿಲ್ಲದೆ ಬಂದ್ಬಿಟ್ವಿ.

ಸುಂದ್ರು: ಅದೇನಿಲ್ಲಾ ಮಾವಯ್ಯ....ಅಲ್ಲಾ, ಇದೇನು ರೈಲು ಇಷ್ಟು ಜಾಗ್ರತೆ ಬಂದ್ಬಿಡ್ತೇ ?

ಪುಟ್ಟು: ಈ ರೈಲ್ನಲ್ಲಿ ಬಂದ್ರೇ....ಫಸ್ಟ್ ಅಂಡ್ ಸೆಕೆಂಡ್ ಕ್ಲಾಸ್ ನಲ್ಲಿ ತಿಗಣೇ ಕಾಟ....ಥರ್ಡ್ ಕ್ಲಾಸ್‌ನಲ್ಲಿ ಜನಗಳ ಕಾಟ ಅಂತ ವಿಮಾನದಲ್ಲೇ ಬಂದ್ಬಿಟ್ಟೇ.... (ಮೀನಾ ಕಡೆ ನೋಡಿ) ಈಕೇನೇ ಅಂತ ಕಾಣುತ್ತೆ ನಿನ್ನ Dear Darlingಉ.

ಸುಂದ್ರು: Not Dearಉ ಮಾವ Dareಉ ;....ನನ್ನ ಕಂಡ್ರೇ Don't careಉ.

ಪುಟ್ಟು: Oh ! I See;....ಈಕೆ ವಿಷಯವೆಲ್ಲಾ ನನಗ್ಗೊತ್ತು.

ಮೀನೂ: ಏನೂ !....ನನ್ನ ವಿಷಯವೆಲ್ಲಾ ನಿಮಗ್ಗೊತ್ತೇ ?

ಪುಟ್ಟು: ಸಂಪೂರ್ಣವಾಗಿ.

ಮೀನೂ: ನಿಮ್ಮ ವಿಷಯವೂ ನನಗೆಲ್ಲಾ ಗೊತ್ತು.

ಪುಟ್ಟು: (ಸುಬ್ಬು ಅನ್ನುವ ಅರ್ಥದಲ್ಲಿ) I See....ಏನಯ್ಯಾ.... ಎಲ್ಲಾ ಹೇಳ್ಬಿಟ್ಟಿದ್ದೀ ಹಾಗಾದ್ರೇ ?

ಸುಂದ್ರು: (ಘಾಬರಿಯಾಗಿ ದಬಾಯಿಸಿಕೊಳ್ಳುವಂತೆ) ಅದೇ ಮಾವ ನೀವು Social workerಉ, ಸೊಸೈಟಿ ರಿಫಾರ್ಮರ್ರೂ ;.... ಅದೇ Lost Electionನ್ನಲ್ಲಿ ನಿಂತು Lost The Deposit ಊ ; Deposit ಕಳಕೊಂಡ್ರೂ Dignity ಉಳಿಸ್ಕೊಂಡಿರೋದು....ಅದೆಲ್ಲಾ ಹೇಳ್ದೆ ಮಾವ....

ಪುಟ್ಟು: ['ಅಷ್ಟೇನೋ' ಎಂಬ ಅರ್ಥದಲ್ಲಿ] Oh! I See ;.... ಸುಂದ್ರೂ ಹೇಳಿದಹಾಗೇ....ಆ Dignity ಉಳಿಸ್ಕೊಂಡಿರೋದ್ರಿಂದಲೇ Next Election ನಲ್ಲಿ Success Sureಊ ಆನ್ನಿ.....ಈ"Mister ಪುಟ್ಟಣ್ಣ" ಇನ್ಕೊಂಚ ದಿನದಲ್ಲಿ "ಮಿನಿಸ್ಟರ್ ಪುಟ್ಟಣ್ಣ";....ನೀನು....ಸಚಿವರ ಸುಜಾತ ಸುಂದರರಾವ್. ಆಮೇಲೆ Rolls Roy's Car ನಲ್ಲೇ

ರಸ್ತೇಲಿ ತಿರುಗೋದು...ಕೈಗೊಂದಾಳು....ಕಾಲ್ಗೊಂದಾಳು,.... ಯಾರ್ಗುಂಟು ! ಯಾರ್ಗಿಲ್ಲಾ ಈ ಸುಖ ಸುಂದ್ರೂ.

ಸುಂದ್ರು: ಇರ್‍ಲಿ !....ಕೈಕಾಲು ತೊಳೆದು ಕಾಫೀ ತಿಂಡಿ ಆಗ್ಲಿ ಮಾವ.

ಪುಟ್ಟು: Oh ! Yes. ನಡೀ....[ಸುತ್ತಲೂ ಕತ್ತು ತಿರುಗಿಸಿ ನೋಡಿ] ಓಹೋ....ಏನು....ಅಸಿಸ್ಟೆಂಟ್ ಕಮಿಷನರ್ ಆದ ಆರು ತಿಂಗಳಲ್ಲೇ ಅರಮನೆ ಕಟ್ಟಬಿಟ್ಟಿದ್ದೀ....

ಸುಂದ್ರು: ಹೊಸಮನೆ ಏನಲ್ಲಾ ಮಾವ. ಮೊದಲಿದ್ದ ಮನೇಗೆ ಮೇಕ್‌ಅಪ್ ಮಾಡಿ ಮಹಡಿ ಹಾಕ್ಸಿದ್ದೀನಿ; ಬನ್ನೀ ಮಾವ ಮನೇ ಎಲ್ಲಾ ನೋಡುವಿರಂತೆ....[ಒಳಗೆ ಹೋಗುತ್ತ] ಹುಂ.... ಇದೇ ಅವಳ್ಗೂ ನನಗೂ ಆಫೀಸ್ ರೂಮು....ಹೀಗ್ ಬನ್ನಿ ಒಳಗೆ.

ಪುಟ್ಟು: I See. [ಸುಂದ್ರು ಪುಟ್ಟು ನಿರ್ಗಮನ]

ಮೀನೂ: ಬನ್ನೀ....ಕೂತ್ಕೊಳ್ಳಿ....ನಿಂತೇ ಇದ್ದೀರಲ್ಲಾ.

ರತ್ನ: ಪರವಾಗಿಲ್ಲ.

ಮೀನೂ: ನಿಮ್ಮ ಹೆಸರೇನು ತಿಳ್ಕೊಳ್ಳಬಹುದೇ ?

ರತ್ನ: ರತ್ನಾ ಅಂತ. ನಿಮ್ಮ ಹೆಸರು ಮಿಸೆಸ್ ಮೀನಾಕ್ಷಿ ಅಂತಲ್ವೇ ?

ಮೀನೂ: ಹೌದು ಹೇಗ್ಗೊತ್ತು ನನ್ನ ಹೆಸರು ನಿಮಗೆ ?

ರತ್ನ: ನಿಮ್ಮ ಯಜಮಾನರು ನಮ್ಮ Fatherಗೆ ಆಗಾಗ್ಯೇ ಬರೀತಾ ಇದ್ದ ಕಾಗದಗಳ ಮೂಲಕ ನಿಮ್ಮ ವಿಷಯವೆಲ್ಲಾ ಗೊತ್ತಾಗಿದೆ.

ಮೀನೂ: ಹಾಗಾದ್ರೇ....ನನ್ನ Ways and Viewsೂ ನಿಮಗೆ ಗೊತ್ತಿರಬೇಕು?

ಅಕ್ಷರ ಗ್ರಂಥಾಲಯ
ಕನ್ನಡ ವಿ.ವಿ. ಹಂಪಿ

ರತ್ನ: ಗೊತ್ತೂ ಅನ್ನಿ. ಅದೇ ಸ್ತ್ರೀಯರಿಗೆ ವಿವಾಹ ವಿಚ್ಛೇದನದ ಹಕ್ಕು ಬೇಕು. ಅಪ್ಪನ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಸಮ ಭಾಗ ಬೇಕು. ಅದು ಶಾಸನವಾಗ್ಲೇಬೇಕು ಅನ್ನೋದು ತಾನೆ ನಿಮ್ಮ ಅಭಿಮತ ?

ಮಿೂನೂ: ನನ್ನ ಅಭಿಮತವೇನು, ಇಡೀ ಸ್ತ್ರೀ ಸಮೂಹದ ಅಭಿಮತವೇ ಅದು.

108047

ರತ್ನ: Excuse me. ನೀವು ತಪ್ಪು ತಿಳ್ಕೊಂಡಿದ್ದೀರ. Views always Differ.

ಮಿೂನೂ: ಆದ್ರೂ.... ವಿದ್ಯಾವಂತ ಮಹಿಳೆಯರೆಲ್ಲಾ ಒಪ್ಪೇ ಒಪ್ತಾರಲ್ವೇ?

ರತ್ನ: ಹಾಗ್ಹೇಳಬೇಡಿ....ನಾನೂ ನಿಮ್ಮ ಹಾಗೆ Graduate ನಿಮ್ Views ನಾನೊಪ್ಪೋಲ್ಲ.

ಮಿೂನು: ಹಾಗಾದ್ರೇ........Divorce and Divedent ಹಕ್ಕು ಸ್ತ್ರೀಯರಿಗೆ ಅನಾವಶ್ಯಕ ಅಂತಾ ತಾನೇ ನಿಮ್ಮ ಅಭಿಪ್ರಾಯ?

ರತ್ನ: ಸದ್ಯದಲ್ಲಿ ಅನಾವಶ್ಯಕ ಅಂತ. ಸಮಾಜ ಸಿವಿಲೈಸ್ ಆಗಿ ಶೇಕಡ ೫೦ ರಷ್ಟು ಮಂದಿ ಮಹಿಳೆಯರಾದ್ರೂ ಅಕ್ಷರಸ್ಥ ರಾಗೋವರೆವಿಗೂ ಅನಾವಶ್ಯಕ. ಈಗ ನೋಡಿ ಒಂದು ವೇಳೆ ವಿವಾಹ ವಿಚ್ಛೇದನ ಶಾಸನವಾಯ್ತು ಅನ್ನಿ, ಒಬ್ಬ ಮಹಿಳೆ ತನ್ನ ಗಂಡನ್ನ ಬಿಟ್ಟು ಹೊರಟು ಹೋಗ್ತಾಳೇ ಅನ್ನಿ. ಅವಳು ಅನಂತರದ ಬಾಳು ಸಾಗಿಸಬೇಕಾದ್ರೇ ವಿದ್ಯಾವಂತಳಾಗಿರ ಬೇಕು. ಇಲ್ಲವೇ ಹಣವಂತಳಾಗಿರಬೇಕು. ಇದ್ಯಾವ Qualificationಊ ಅಥ್ವಾ Qualityಯೂ ಇಲ್ದಿದ್ರೇ, ಕುರೂಪಿಯಾಗಿ ಬಡವಳಾಗಿದ್ರೆ ಅವಳು ಜೀವನ ನಡೆಸೋದು

ಹೇಗೇ ಅಂತ? ಅದರಿಂದಲೇ ನಾನು ಹೇಳೋದು; ಸದ್ಯದಲ್ಲಿ ವಿವಾಹ ವಿಚ್ಛೇದನ ಪದ್ಧತಿ ನಮ್ಮ ಸಮಾಜಕ್ಕೆ ಸರಿಯಾದು ದಲ್ಲಾ ಅಂತ.

ಮಿಸೆಸ್: ಅದೇನೋ ಸರಿ....ಸಮಾಜ ಸಿವಿಲೈಸ್ ಆಗೋವರ್ಗ್ಗೂ ಸ್ತ್ರೀಯರು ಗಂಡಸರ ಗುಲಾಮರೇ ಆಗಿರಬೇಕೂ ಅನ್ನಿ?

ರತ್ನ: ಗಂಡನಿಗೆ ಮಾಡೋ ಸೇವೆ ಗುಲಾಮಗಿರಿಯೇ !!!.... ಎಂದಿಗೂ ಅಲ್ಲ;.... ಅದು ಪತ್ನಿಯಾದವಳ ಪವಿತ್ರ ಕರ್ತವ್ಯ. ಪತಿಪತ್ನಿಯರಲ್ಲಿ ಪ್ರೀತಿವಾತ್ಸಲ್ಯ ಬೆಳೆದಷ್ಟೂ ಸಂಸಾರದಲ್ಲೂ ಹಾಗೂ ಸಮಾಜದಲ್ಲೂ ಸುಖಶಾಂತಿ ನೆಲಸುತ್ತೆ ಅದೇ ನಮ್ಮ ಸಮಾಜ ಧರ್ಮ.

ಮಿಸೆಸ್: ಹಾಗಾದ್ರೆ....ಗಂಡನಾದವನು ಇದನ್ನು ತಿಳ್ಕೊಳ್ಳಬೇಕಲ್ಲ.

ರತ್ನ: ತಿಳ್ಕೊಳ್ಳುವಂತೆ ಮಾಡುವ ಕೆಲಸ ಕೈಹಿಡಿದ ಹೆಂಡ್ತೀದು. ಗಂಡಾ ತಪ್ಪುಹಾದಿ ಹಿಡಿದಿದ್ದರೆ ಅದನ್ನು ತಿದ್ದೋ ಕೆಲಸ ನಮಗೆ ಸೇರಿದ್ದು. ಪತಿಯೇ ನಮಗೆ ದೇವರು. ನಮ್ಮ ಮನೆಯೇ ನಮಗೆ ಸಮಾಜ. ನಮ್ಮ ಮಕ್ಕಳೇ ಸಮಾಜದ ಪ್ರಜೆಗಳು. ಅವರನ್ನು ಸರಿಯಾದ ಹಾದಿಯಲ್ಲಿ ಬೆಳೆಸಿ ಸತ್ಪ್ರಜೆಗಳನ್ನಾಗಿ ಮಾಡೋದಕ್ಕಿಂತಾ ಸಮಾಜ ಸೇವೆ ಬೇರೆ ಏನೂ ಇಲ್ಲ.

ಮಿಸೆಸ್: [Feeling] ಅರ್ಥವಾಯ್ತು ರತ್ನಾ ಅರ್ಥವಾಯ್ತು.

ರತ್ನ: ನೀವು ಇನ್ನೂ ನಿಮ್ಮ ಪತಿಯನ್ನು ಸರಿಯಾಗಿ ಪರೀಕ್ಷಿಸಿಲ್ಲ. ಅವರು ಚಿನ್ನದಂತಹ ಮನುಷ್ಯರು. ಸರಳ ಸ್ವಭಾವದವರು ದೇವ-ದೇವರೂ ಅಂದ್ರೆ ಹೆದರಿ ನಡೆಯುವವರು.

ಮಿಸೆಸ್: [Deep Feeling] ಹೌದು ರತ್ನಾ....ಈಗ ಅವರ ಸದ್ಗುಣಗಳೆಲ್ಲಾ ಮನಸ್ಸಿಗೆ ಬರ್‍ತಾ ಇದೆ,....ಪಾಪ: ಅವರಿಗೆಷ್ಟು ಕಷ್ಟಕೊಟ್ಟೆ. ಸೌಟು ಹಿಡಿಸಿದೆ. ಸೀರೆ ಒಗಸಿದೆ. ಸಿಕ್ಕಾಪಟ್ಟೆ

ಮೂದಲಿಸಿದೆ. ಆದರೂ ಶಾಂತ ಸ್ವಭಾವ ತೋರಿದರು..... (ತೀವ್ರ ಪಶ್ಚಾತ್ತಾಪದಿಂದ) ರತ್ನಾ....ಈ ನನ್ನ ಪಾಪಕ್ಕೆಲ್ಲಾ ಪ್ರಾಯಶ್ಚಿತ್ತ ಏನು ರತ್ನಾ.

ರತ್ನ: ಅವರ ಕಾಲಿಗೆ ಬಿದ್ದು ಕ್ಷಮೆ ಬೇಡುವುದೊಂದೇ....

[ಅಷ್ಟರಲ್ಲಿ ನಾಗಜ್ಜಿ ಪ್ರವೇಶ]

ನಾಗಜ್ಜಿ: (ಪ್ರವೇಶಿಸುತ್ತಾ) ಏನೇ....ಆಗ್ಲೆ ಅವಳಿಗೆ ಕಿವಿ ಹಿಂಡ್ತಿದ್ದೀ. ....ಅವಳ್ಗೂ ಮೋಡಿ ಹಾಕ್ತಿದ್ದಿಯೇನೆ?

ರತ್ನ: ಇಲ್ಲಾಜ್ಜಿ....ಮೀನಾಕ್ಷಿ ಬಹಳ ಒಳ್ಳೆಯವರು.

ನಾಗಜ್ಜಿ: ಅಗೋ ನೋಡು....ಆಗ್ಲೇ ಹಾಕ್ಬಿಟ್ಟಿದ್ದಾಳೆ ಮೋಡಿ. ಈಗ್ಬಂದ ಹುಡುಗಿ, ಆಗ್ಲೇ ಅವಳ್ಕಡೆ ಆಗಬೇಕಾದ್ರೇ!!.... ಹೋಗೇ....ಒಳಗ್ಹೋಗಿ ಕೂಳ್ಕತ್ರಸು..

(ಅಷ್ಟರಲ್ಲಿ ಸುಂದ್ರೂ. ಪುಟ್ಟು ಪ್ರವೇಶ)

ಸುಂದ್ರು: [ಪ್ರವೇಶಿಸುತ್ತಾ] So, ಎಲ್ಲಾ ವಿಷಯವೂ ಗೊತ್ತಾಯ್ತಾ ಮಾವಯ್ಯಾ?

ಪುಟ್ಟು: I See.... ಹೀಗಿದೆಯೋ ಸಮಾಚಾರ!

ಸುಂದ್ರು: [ಸಮೀಪಿಸಿ] ಮೀನೂ....ನಾವೆಲ್ಲಾ ಡಿಸೈಡ್ ಮಾಡಿದ್ದಾಯ್ತು....Please Divorce me and make the way for my marriage.

ಮೀನೂ: ಹಾಗಾದ್ರೇ..ನಾನೀಗ ಡೈವೋರ್ಸ್ ಮಾಡ್ಲೇಬೇಕೂ ಅನ್ನಿ.

ಸುಂದ್ರು: ಖಂಡಿತಾ ಮೀನೂ....ಕಾಗದಾ ಪೆನ್ನು ತಗೋ....ರೈಲಿಗಿನ್ನೂ ಟೈಂ ಇದೆ.

ಮೀನು: [ಕಾಗದ ಪೆನ್, ತೆಗೆದುಕೊಂಡು ಮೇಜಿನಬಳಿ ಕುಳಿತು] Alright ಏನು ಬರೀಬೇಕು ಹೇಳಿ.

ಪುಟ್ಟು: [ದೀರ್ಘವಾಗಿ] I see !!!

ಸುಂದ್ರು: [ಹೇಳಿ ಬರೆಸುವರೀತಿ] ....ಬರೀ....'ನನ್ನ ಪ್ರೀತಿಯ ಪತಿ' ....Sorry ಹಾಗಲ್ಲ ....ಪ್ರೀತಿ ಎಲ್ಲಿಂದ ಬಂತು....'ನನ್ನ ಪತಿಯವರಿಗೆ .... ಅಗ್ನಿ ಸಾಕ್ಷಿಯಾಗಿ ಕೈಹಿಡಿದ ಅರ್ಧಾಂಗಿ ಮೀನಾಕ್ಷಿಯು ಮನಃಪೂರ್ವಕವಾಗಿ ಬರೆದುಕೊಟ್ಟ ವಿವಾಹ ವಿಚ್ಛೇದನ ಪತ್ರ. ಅದೇನೆಂದರೆ....ಗೃಹಕೃತ್ಯದ ನಾನಾ ಕಾರಣ ಗಳಿಂದಲೂ, ನನಗೂ ನಿಮಗೂ ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಬಂದಿದ್ದರಿಂದಲೂ ನಿಮ್ಮೊಡನೆ ವಿವಾಹ ವಿಚ್ಛೇದನೆ ಹೊಂದಿದ್ದೇನೆ. ಇನ್ನುಮುಂದೆ ನನಗೂ ನಿಮಗೂ ಯಾವವಿಧವಾದ ಸಂಬಂಧವೂ ಇರುವುದಿಲ್ಲ. ಇತಿ....ನಿಮ ಅರ್ಧಾಂಗಿ'....ಹುಂ ! ರುಜುಮಾಡು.

ನಾಗಜ್ಜಿ: ಅದೇನು ಉಯಿಲು ಬರೆದುಕೊಟ್ಳೋ ?

ಸುಂದ್ರು: ವಿಲ್ ಅಲ್ಲಮ್ಮಾ ಅದು. ನನ್ನ ಬಿಟ್ಬಿಟ್ಟದ್ದೀನಿ ಅಂತ ಪತ್ರ ಬರೆದುಕೊಟ್ಟಳು.

ನಾಗಜ್ಜಿ: ಗಂಡನ್ನ ಬಿಟ್ಟು ಹೋಗೋಕೆ ಪತ್ರ ಬೇರೇ ಬರ್ಕೊಡ್ಬೇಕೇ. ....ಆಶ್ಚರ್ಯವೇ !!!

ಮೀನೂ: ತಗೋಳಿ ಪತ್ರ.

ಪುಟ್ಟು: ಪತ್ರ ಕೊಡೋಕ್ ಮೊದ್ಲು ಇನ್ನೊಂದ್ಸಲ ಯೋಚಿಸಿ.

ಮೀನೂ: ನನಗೆ ಯಾರ ಅಡ್ವೈಸೂ ಅನಾವಶ್ಯಕ.

ಪುಟ್ಟು: I See !!

ಸುಂದ್ರು: ಕೇಳಿ ಮಾವಾ....ಕೇಳಮ್ಮಾ; ಒಂದ್ಸಲ ಓದ್ಬಿಡ್ತೀನಿ [ಓದುವನು] "ನನ್ನ ಪ್ರೇಮಾರಾಧನ ಮೂರ್ತಿಗೆ" [ಚಕಿತ] ಪ್ರೇಮಾರಾಧನ ಮೂರ್ತಿಗೇ !!!"ನಿಮ್ಮ ಚರಣದಾಸಿ ಮೀನಾಕ್ಷಿ

ಯ ಹೃದಯ ವೀಣೆ ಮಿಡಿದೆರಡು ನುಡಿಗಳು".....ಮಿಾನೂ !! ....ಏನಿದಾಶ್ಚರ್ಯ.

ಪುಟ್ಟು: I See.

ಸುಂದ್ರು: "ನನ್ನ ಜೀವನದಲ್ಲಿ ಇಂದೇ ಸುದಿನ. ಆತ್ಮೀಯತೆಯ ಅರಿವಿಲ್ಲದ ಈ ಅಬಲೆ ಸಗ್ಗದ ಸೋಪಾನ ಹುಡುಕುವ ಸೋಗಿನಲ್ಲಿ ನರಕದತ್ತ ನುಗ್ಗಿ ಹೋಗುತ್ತಿದ್ದಳು. ಅಬಲೆಯಿಂದಲೇ ಈ ಅಬಲೆ ಅಭ್ಯುದಯದ ಮುಂಬೆಳಕು ಕಂಡಳು"!..ಮಿಾನೂ!! ...."ಪತಿಪತ್ನಿಯರ ಅಚಲ ಪ್ರೇಮವೇ ಸಮಾಜದ ಸುಖ ಶಾಂತಿಯ ಮೂಲವೆಂದರಿತಳು.... ಸ್ವಾಮಿಾ ;....ನನ್ನ ಅಪರಾಧ ವನ್ನೆಲ್ಲಾ ಮನ್ನಿಸಿ ನನ್ನನ್ನು ಮತ್ತೊಮ್ಮೆ ಪ್ರೀತಿಯಿಂದ ಸ್ವೀಕರಿಸಲಾರಿರಾ....ಇತಿ ನಿಮ್ಮ ಪ್ರೇಮ ರಾಣಿ....ಮಿಾನೂ...."

ಮಿಾನೂ: ಕ್ಷಮಿಸಿ ಪ್ರಭೂ....

ಸುಂದ್ರೂ; ಏಳೂ ಮಿಾನೂ....ಏಳು. ನಿನ್ನ ಹೃದಯ ಎಷ್ಟು ನಿರ್ಮಲಾ ಮಿಾನೂ ! ಏಳು ಅಮ್ಮನಿಗೆ ನಮಸ್ಕಾರ ಮಾಡು.

ಮಿಾನೂ; ಕ್ಷಮಿಸಿ ಅತ್ತೆ.

ನಾಗಜ್ಜಿ: ಶೀಘ್ರಮೇವಪುತ್ರಸಂತಾನಾಭಿರಸ್ತು.

ಸುಂದ್ರು: ಹಿರಿಯರು....ಪುಟ್ಟೊಮಾವ.... ಅವರಿಗೂ ನಮಸ್ಕಾರ ಮಾಡು.

ಪುಟ್ಟು: ಅರರೇ....ನಾನು ಹಿರಿಯನೂ ಅಲ್ಲ. ಏನೂ ಅಲ್ಲ....ನಾನು ಪುಟ್ಟೊನೂ ಅಲ್ಲ Political figureಊ ಅಲ್ಲ;.... Political disfigure ಉ....ನನಗ್ಯಾಕೀ ಮೀಸೆ (ಮೀಸೆ ಕಿತ್ತುಹಾಕಿ, ಗಾಂಧಿಟೋಪಿ ತೆಗೆದುಹಾಕಿ) **ನನಗ್ಯಾಕೀಕ್ಯಾಮೂಫ್ಲೇಜು**....ನನಗೆ ಮದುವೆ ಒಂದು ಕೇಡು, ಮಕ್ಕಳೊಂದು ಕೇಡು ನಾನು..ಸುಂದ್ರೂ Dearest Friend ಉ

ಕುಣಿಗಲ್‌ನಲ್ಲಿರೋ 'ಮೃತ್ಯುಂಜಯ ಮೆಡಿಕಲ್ ಹೋಂ' ಮಾಲೀಕ.... ಡಾ॥ ಸುಬ್ಬರಾವ್.

ಮಿೂನೂ: I See!!!

ನಾಗಜ್ಜಿ: ಸುಬ್ಬೂನೋ....ಪರವಾಗಿಲ್ಲಾ. ಇಬ್ಬರೂ ಸೇರ್ಕೊಂಡು ಒಳ್ಳೇ ನಾಟಕವೇ ಆಡಿದಿರಿ.... ಎಷ್ಟಾದ್ರೂ .... **"ಗಂಡ್ಸಲ್ವೇ ಗಂಡ್ಸೂ"**. (ಲೀಲಾ ಕಡೆ ನೋಡಿ) ಏನೇ ನೋಡ್ತಾ ಇದ್ದೀ! ....ಕೊಡೇ ಕೈಯಿ (ಲೀಲಾ ತನ್ನ ಕೈಯನ್ನು ಸುಬ್ಬುವಿನ ಕೈಯಲ್ಲಿಡುವಳು) ಇದಲ್ಲವೇ ನಿಜವಾದ ಮನಸ್ಸಿನ ಮದುವೇ.... ಶುಭಲಗ್ನಾ ಸಾವಧಾನ....

(ತೆರೆಯೊಳಗೆ)

ಶುಭಲಗ್ನಾ ಸಾವಧಾನ, ಶುಭ ಮುಹೂರ್ತ ಸಾವಧಾನ
ಲಕ್ಷ್ಮೀ ನಾರಾಯಣ ಸಾವಧಾನ

(ಮೇಳದ ರಿಕಾರ್ಡ್ ಹಾಡುತ್ತಿರುವಾಗ ತೆರೆ ಬೀಳುವುದು)

—:★:—

AKSHARA GRANTHALAYA
ACC.NO. 108047